# ಮುನ್ನುಡಿ

ಪುಸ್ತಕವೆಂದ ಮೇಲೆ ಅದಕ್ಕೊಂದು ಮುನ್ನುಡಿಯು ಬೇಕೇಬೇಕಲ್ಲ! ಇದೋ! ಆ ಮುನ್ನುಡಿ! ಮೊದಲು ವಾಚಕರಲ್ಲಿ ಕ್ಷಮೆಬೇಡುತ್ತೇನೆ ಪ್ರಥಮ ಭಾಗವನ್ನು ಪ್ರಕಟಿಸಿ ಅನೇಕ ವರ್ಷಗಳಾಗಿ ಹೋದುವು. ಬಹುಜನರು ದ್ವಿತೀಯ ಭಾಗವನ್ನು "ಕೊಡಿ ಕೊಡಿ" ಎಂದು ಕೇಳುತ್ತಿದ್ದರು.

ಏಕೆ ಕೊಡಲಾಗಲಿಲ್ಲ! ಆ ಪ್ರಥಮ ಭಾಗವನ್ನು ಪ್ರಕಟಿಸುತ್ತಲೇ ನಾನು ಕಾರಾಗೃಹವಾಸಕ್ಕೆ ಹೋಗಿಬಿಟ್ಟೆ! ಕಾರಾಗೃಹದಿಂದ ಹೊರಕ್ಕೆ ಬರುತ್ತಲೇ ರಾಜಕೀಯ ಚಳುವಳಿಯಲ್ಲಿ ಮುಳುಗಿದೆ ಅವಕಾಶವೇ ಇಲ್ಲ! ಇದು ಮೊದಲನೆಯ ಕಷ್ಟ—

ಆ ಮೇಲೆ ಪುಸ್ತಕವನ್ನು ಅಚ್ಚು ಹಾಕಿಸಲು ಹಣವಿಲ್ಲ! ಇದು ನಿಜವಾದ ಕಾರಣ

ಯುದ್ಧವು ಬಂತು. ಪುಸ್ತಕವನ್ನು ಅಚ್ಚುಹಾಕಿಸಲು ಕಾಗದ ದೊರೆಯಲಿಲ್ಲ ಈಗಲೂ ದೊರೆಯಲಿ, ಇಲ್ಲ ಕನ್ನಡದಲ್ಲಿ ಒಂದು ಗಾದೆಯು ಇದೆ. ಉಡುವುದಕ್ಕೆ ಸೀರೆ ಇಲ್ಲದಿದ್ದರೆ ಪಟ್ಟೆಸೀರೆ ಎಂದು ಹಾಗೆ! ಬಹಳ ಬೆಲೆಕೊಟ್ಟು ಈ ಭಾರೀ ಕಾಗದವನ್ನು ತೆಗೆದು ಪುಸ್ತಕವನ್ನು ಮುದ್ರಿಸಿ ಬಲು ಕಷ್ಟದಿಂದ ವಾಚಕರಲ್ಲಿ ಸಮರ್ಪಿಸಿದೇನೆ.

ಮುದ್ರಣವು ತಪ್ಪಿನಿಂದ ದೂರವಾದುದೇನೂ ಅಲ್ಲ! ಆದರೂ ಪರವಾಗಿಲ್ಲ.

ಈ ಕಥೆಯಲ್ಲಿ ಇನ್ನೂ ಒಂದು ಭಾಗವಿದೆ. ಅದು ೩೫೦ ಪುಟಗಳಾಗುತ್ತದೆ. ಅದನ್ನು ಕ್ಷಿಪ್ರದಲ್ಲಿಯೇ ವಾಚಕರಲ್ಲಿ ಸಮರ್ಪಿಸುತ್ತೇನೆ.

ಈ ಕಾದಂಬರಿಗೆ "ದೌಲತ್" ಎಂದು ಹೆಸರು. ಪ್ರಥಮ ಭಾಗ ಮಂತ್ರವಧೆ! ಅದನ್ನು ವಾಚಕರು ಓದಿ ನನಗೆ ಶಹಬಾಸ್‌ಗಿರಿಯನ್ನು ಕೊಟ್ಟಿದೀರಿ. ಇದು ದೌಲತ್ ದ್ವಿತೀಯ ಭಾಗ. "ಮಂಗಳೂರಿನ ವಿಪ್ಲವ" ಎಂದು—ಇದಕ್ಕೆ ಸಂಕೇತ! ಇದನ್ನು ಆದರ ವಿಶ್ವಾಸಗಳಿಂದ ಓದುತ್ತೀರೆಂದು ನನ್ನ ನಂಬಿಕೆ. ಮೂರನೆಯ ಭಾಗ "ಕೊಡಗಿನ ಅತ್ಯಾಚಾರ" ಮತ್ತು "ಕೊನೆಯ ದಿನ" ಹೀಗೆ ಮೂರು ಭಾಗಗಳು.

# II

ಈ ಕಾದಂಬರಿಯ ಸ್ವಾರಸ್ಯ-ಅಸ್ವಾರಸ್ಯಗಳ ವಿಚಾರದಲ್ಲಿ ನಾನು ಏನನ್ನೂ ಹೇಳುವುದಿಲ್ಲ! ನನ್ನ ಮನಸ್ಸಿನ ಸಂಕೋಚದ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ.

ಈ "ದೌಲತ್" ಮೂರು ಭಾಗಗಳೂ ಸೇರಿ ಸುಮಾರು ೭೫೦ ಪುಟಗಳಾಗುತ್ತವೆ. ವಾಚಕರು ಬೇಸರಗೊಳ್ಳುವರೇನೋ ಎಂಬ ಶಂಕೆ! ಅವರೆ ದೀರ್ಘವಾಗುತ್ತೆಂದು ಹೆದರಿ ಅನೇಕ ಸ್ವಾರಸ್ಯ ಘಟ್ಟಗಳನ್ನು ಬಿಟ್ಟುಬಿಟ್ಟೆನಲ್ಲಾ ಎಂಬ ಆತಂಕ! ಇವೆರಡರಲ್ಲಿ ಡೋಲಾಯಮಾನ ಮನಸ್ಕನಾಗಿ ಈ ಕಾದಂಬರಿಯನ್ನು ಬರೆದಿದ್ದೇನೆ.

ಈ ಕಾದಂಬರಿಯು ಟೆಕ್ಸ್ಟ್ ಬುಕ್ ಕಮಿಟಿಗೆ ದೌರ್ಭಾಗ್ಯವಶಾತ್ ಒಂದು ಬಾರಿ ಹೋಗಿತ್ತಂತೆ! ಒಬ್ಬಿಬ್ಬರು ಪಂಡಿತಂಮನ್ಯರು ದೌಲತ್ ಕಾದಂಬರಿಯಲ್ಲಿ "ಶೃಂಗಾರವು ಬಲು ಹೆಚ್ಚು" ಎಂದು ಪುಸ್ತಕವನ್ನು ಕೈಬಿಟ್ಟರಂತೆ! ಇವರುಗಳಿಗೆ ಶೃಂಗಾರರಸವೇ ಗೊತ್ತಿಲ್ಲವೇ! ನಾನು ಪರಿತಾಪಪಟ್ಟೆ! ಅವನ್ನು ವಾಚಕರಿಗೂ ಇಲ್ಲಿ ಹೇಳುತ್ತಿದ್ದೇನೆ. ಇದು ಚಾರಿತ್ರಿಕ ಕಾದಂಬರಿ! ಸಂಪೂರ್ಣ ಶೃಂಗಾರರಸವನ್ನೇ ಚಿತ್ರಿಸುವುದು ಸಾಧ್ಯವಾಗದೇ ಹೋಯಿತು! ಕ್ಷಿಪ್ರದಲ್ಲಿಯೇ ಮತ್ತೊಂದು ಕಾದಂಬರಿಯನ್ನು ವಾಚಕರಿಗೆ ಅರ್ಪಿಸುತ್ತೇನೆ ಅದರಲ್ಲಿ ಶೃಂಗಾರ—ಶೃಂಗಾರ—ಶೃಂಗಾರ! ಅಲ್ಲಿ ನೋಡಲಿ! ಶೃಂಗಾರದ ವೈಭವವನ್ನು!

ವಾಚಕರು ನನಗೆ ತೋರಿರುವ ಅಪರ ಪ್ರೋತ್ಸಾಹಗಳಿಗಾಗಿ ನಾನು ಯಾವಾಗಲೂ ತಮ್ಮಗಳಿಗೆ ಕೃತಜ್ಞನಾಗಿದ್ದೇನೆ.

ಸೀತಾರಾಮಶಾಸ್ತ್ರಿ.

# ಪ್ರಥಮ ಭಾಗದ ಕಥಾಸಾರಾಂಶ

ಇಯಜ್‌ಖಾನನೆಂಬುವನು ನವಾಬ್ ಹೈದರಲ್ಲೀ ಖಾನರವರ ದತ್ತು ಮಗ! ಹೈದರ್ ಬದುಕಿರುವಾಗಲೇ, ಇಯಜ್‌ಖಾನನನ್ನು ನಗರದ ನವಾಬನನ್ನಾಗಿ ಮಾಡಿದ್ದರು. ದೌಲತ್ ಎಂಬುವಳು ಹೈದರಲ್ಲೀಖಾನರ ಸಾಕು ಮಗಳು. ಅವಳೂ ನಗರದಲ್ಲಿಯೇ ಇದ್ದಳು.

ಟಿಪ್ಪೂಸುಲ್ತಾನನೂ-ಇಯಜ್‌ಖಾನನೂ ಇಬ್ಬರೂ ಬಾಲ್ಯದಿಂದಲೂ ದೌಲತ್ತಳನ್ನು ಮದುವೆಯಾಗಬೇಕೆಂದು ಆಶೆಯುಳ್ಳವರಾಗಿದ್ದರು. ದೌಲತ್ತಳು ಯಾರನ್ನೂ ಮದುವೆಯಾಗಿರಲಿಲ್ಲ.

ಹೈದರನು ತನ್ನ ಮರಣಕಾಲದಲ್ಲಿ ತನ್ನ ಬಾಲ್ಯಸ್ನೇಹಿತನಾದ ಬಡಾ ಫಕೀರನೆಂಬ ಮಹಾ ಪುರುಷನನ್ನು ಕಳಿಸಿ ದೌಲತ್ತಳನ್ನು ಕರಸಿಕೊಂಡು, ಟಿಪ್ಪೂಸುಲ್ತಾನನೂ ಇಯಜ್‌ಖಾನನೂ ಪರಸ್ಪರ ಹೋರಾಡದಂತೆ ನೋಡಿಕೊಳ್ಳುವುದಾಗಿ ಅವಳಿಂದ ವಾಗ್ದಾನವನ್ನು ತೆಗೆದುಕೊಂಡು, ಸತ್ತುಹೋದನು. ಹೈದರಾಲಿಯು ಸತ್ತ ತರುಣದಲ್ಲಿಯೇ ಟಿಪ್ಪೂಸುಲ್ತಾನನು ಯಾವುದೋ ನೆಪದಿಂದ ಇಯಜ್‌ಖಾನನೊಡನೆ ಜಗಳ ತೆಗೆದು, ನಗರದ ಮೇಲೆ ದಂಡೆತ್ತಿಹೊರಟನು. ಮಹಮ್ಮದಾಲಿಯೆಂಬ ಸುಪ್ರಸಿದ್ಧ ಸೇನಾನಾಯಕನನ್ನು ಪ್ರಬಲವಾದ ಸೈನ್ಯದೊಡನೆ ನಗರದ ಮೇಲೆ ದಂಡೆತ್ತಿ ಕಳುಹಿಸಿ ತಾನು ಆ ಸೈನ್ಯದ ಹಿಂದೆಯೇ ಹೋಗಿ ದೂರದಲ್ಲಿ ಬಿಡಾರ ಮಾಡಿದ್ದನು. ಟಿಪ್ಪೂಸುಲ್ತಾನರು ನಗರದ ಮೇಲೆ ದಂಡೆತ್ತಿ ಬರುವ ಸಮಾಚಾರವು ತಿಳಿಯಬರುತ್ತಲೇ ದೌಲತ್ತಳು ಇಯಜ್‌ಖಾನನ ರಾಜ್ಯತ್ಯಾಗ ಮಾಡಿಸಿದಳು

ಇಯಜ್‌ಖಾನನು ರಾಜ್ಯತ್ಯಾಗ ಮಾಡಿ ತನ್ನ ರಾಜ್ಯಾಧಿಕಾರವನ್ನು ಖಾಸಿಂಖಾನ್ ಎಂಬ ಸೇನಾಧಿಪತಿಗೆ ಒಪ್ಪಿಸಿ ಮಹಮ್ಮದಾಲಿಯವರನ್ನು ಗೌರವದಿಂದ ಸ್ವಾಗತಿಸಿ ನಗರದ ರಾಜ್ಯವನ್ನು ಅವರಿಗೆ ಒಪ್ಪಿಸಿಬಿಡಬೇಕೆಂದು ಅಪ್ಪಣೆ ಮಾಡಿ ತಾನು ಅಂತರ್ಧಾನವಾದನು.

ಮಹಮ್ಮದಾಲಿಯು ಸೈನ್ಯ ಸಮೇತನಾಗಿ ನಗರಕ್ಕೆ ಬಂದನು. ದಾರಿಯುದ್ದಕ್ಕೂ ಮಹಮ್ಮದಾಲಿಗೆ ಸ್ವಾಗತದ ಏರ್ಪಾಡುಗಳಾಗಿದ್ದವು. ಖಾಸಿಂಖಾನನು ಅವನನ್ನು ನಗರದ ಅರಮನೆಯಲ್ಲಿ ಇಳಿಸಿ ರಾಜ್ಯವನ್ನು ಅವರಿಗೆ

ಒಪ್ಪಿಸಿದನು. ಮುಹಮ್ಮದಾಲಿಯು ಇಯಜ್‌ಖಾನನ ರಾಜ್ಯತ್ಯಾಗದ ಕಥೆಯನ್ನು ಕೇಳಿ ಖಾಸಿಂಖಾನನು ತನಗೆ ರಾಜ್ಯವನ್ನು ಒಪ್ಪಿಸಿದ ರೀತಿಯನ್ನು ನೋಡಿ ಆಶ್ಚರ್ಯಚಕಿತನಾಗಿ ಖಾಸಿಂಖಾನನನ್ನು ಜೊತೆಯಲ್ಲಿ ಕರೆದುಕೊಂಡು ಸುಲ್ತಾನರ ಶಿಬಿರಕ್ಕೆ ಹೋಗಿ ಎಲ್ಲವನ್ನೂ ಸುಲ್ತಾನರಿಗೆ ಬಿನ್ನಯಿಸಿದನು.

ಸುಲ್ತಾನನು ಅಪ್ರತಿಭನಾಗಿ ಮುಹಮ್ಮದಾಲಿಯ ಶಿಫಾರಸಿನಂತೆ ನಗರದ ದಿವಾನಗಿರಿಯನ್ನು ಖಾಸಿಂಖಾನನಿಗೆ ಕೊಟ್ಟನು. ಅನಂತರ ಖಾಸಿಂಖಾನನನ್ನು ಅಂತರಂಗದಲ್ಲಿ ಕರೆಸಿ ಇಯಾಜ್‌ಖಾನನನ್ನು ಜರಿದನು. ಖಾಸಿಂಖಾನನಿಗೂ ಸುಲ್ತಾನರಿಗೂ ವಾಗ್ವಾದವಾಗಿ ಪ್ರಕೋಪಕ್ಕೆ ಬಂದು ಸುಲ್ತಾನನು ಖಾಸಿಂಖಾನನನ್ನು ಗಲ್ಲಿಗೇರಿಸುವಂತೆ ಅಪ್ಪಣೆ ಮಾಡಿದನು.

ಅವನನ್ನು ರಾಜಭಟರು ಗಲ್ಲಿಗೇರಿಸುವ ಸಂದರ್ಭದಲ್ಲಿ ಈ ಸಮಾಚಾರವು ಮುಹಮ್ಮದಾಲಿಗೆ ತಿಳಿದು ಶರಣಾಗತರಕ್ಷಣೆ ಮಾಡುವುದಕ್ಕಾಗಿ ಖಾಸಿಂಖಾನನನ್ನು ಉಳಿಸಿಬಿಟ್ಟನು.

ಸುಲ್ತಾನನಿಗೆ ಈ ಸಮಾಚಾರವು ತಿಳಿದು ಮುಹಮ್ಮದಾಲಿಯನ್ನೂ ಖಾಸಿಂಖಾನನನ್ನೂ ಹಿಡಿತರಿಸಿ, ಖಾಸಿಂಖಾನನನ್ನು ವಧೆಮಾಡಿಸಿ ಮುಹಮ್ಮದಾಲಿಯನ್ನು ಬಂಧನದಲ್ಲಿ ಇರಿಸಿದನು.

ಆ ಸಮಯದಲ್ಲಿ ಆಸ್ಥಾನದಲ್ಲಿದ್ದ ಮುಹಮ್ಮದಾಲಿಯ ವಿರೋಧಿಗಳು ಸುಲ್ತಾನರಲ್ಲಿ ಮುಹಮ್ಮದಾಲಿಯ ಮೇಲೆ ನಾನಾವಿಧವಾದ ಚಾಡಿಗಳನ್ನು ಹೇಳಿ ಸುಲ್ತಾನರನ್ನು ರೇಗಿಸಿದರು.

ಅನಂತರ ಸುಲ್ತಾನನು ಮುಹಮ್ಮದಾಲಿಯವರನ್ನು ದರಬಾರಿನಲ್ಲಿ ವಿಚಾರಣೆಗೆ ಗುರಿಮಾಡಿದನು. ಈ ಸಮಾಚಾರವು ಶ್ರೀರಂಗಪಟ್ಟಣಕ್ಕೆ ತಿಳಿದು ಮುಹಮ್ಮದಾಲಿಯವರ ಪತ್ನಿಯು ಗಾಬರಿಗೊಂಡು ಅವರನ್ನು ಉದ್ಧಾರಮಾಡಲು ಶಿಬಿರಕ್ಕೆ ಬಂದಳು.

ಸುಲ್ತಾನನು ದರಬಾರಿನಲ್ಲಿ ವಿಚಾರಣೆ ಮಾಡುವಾಗ ಕೃತ್ರಿಮ ಸಂಧಾನವು ನಡೆದು ಸುಲ್ತಾನನು ಮುಹಮ್ಮದಾಲಿಯನ್ನು ಅಪರಾಧಿಯೆಂದೇ ನಿಶ್ಚಯಿಸಿದನು. ಆ ಸಂದರ್ಭದಲ್ಲಿ ಸುಲ್ತಾನನ ಮುಂದೆ ಬಂದು ಪ್ರತಿಭಟಿಸಿದ ಆ ಮಹಾ ಸೇನಾನಾಯಕನ ಪತ್ನಿಯನ್ನು ಕೃದ್ಧನಾದ ಸುಲ್ತಾನನು ಒಬ್ಬ ಗುಲಾಮನಿಗೆ ಕೊಟ್ಟು ಮದುವೆ ಮಾಡಿಸಿ, ಮುಹಮ್ಮದಾಲಿಗೆ ವಿಷಪಾನ ಮಾಡಿಸಿ ಕೊಲ್ಲಿಸಿದನು.

ಇದು ಪ್ರಥಮಭಾಗದ ಕಥೆಯ ಸಂಗ್ರಹ.

ದುರ್ದೈವವೆಂದು ಹೇಳಬೇಕು. ಹೇಗೇ ಆಗಲಿ! ನಾವು ಎದುರು ನಿಂತು ಖಡಾಖಡಿ ಯುದ್ಧ ಮಾಡಿದ್ದೇವೆ. ಯುದ್ಧದಲ್ಲಿ ಸೆರೆ ಸಿಕ್ಕಿದ ಸೇನಾಪತಿಗಳನ್ನು ಹೇಗೆ ಶಿಕ್ಷಿಸಬೇಕೋ ಹಾಗೆ ತಾವು ಶಿಕ್ಷಿಸಬಹುದು. ಈ ಶರೀರವು ನಶ್ವರವಾದುದು. ನಾನು ಮೈಸೂರಿನ ಎಷ್ಟೋ ಯುದ್ಧಗಳಲ್ಲಿ ಹೋರಾಡಿದ್ದೇನೆ, ಕೊಯಮತ್ತೂರಿನ ಕಾಳಗದಲ್ಲಿ ನಾನು ತಮ್ಮ ಬಲಗೈಯಂತೆ ಯುದ್ಧ ಮಾಡಿದೇನೆ. ಶತೃಗಳ ಕೈಲಿ ಸೆರೆ ಸಿಕ್ಕಿದ ಅಪಯಶವು ನನಗಿಲ್ಲ. ತಮ್ಮ ಕೈಯಲ್ಲಿ ಸೆರೆ ಸಿಕ್ಕುವುದೂ ಪ್ರಾಣ ಬಿಡುವುದೂ ನನಗೆ ಗೌರವಾಸ್ಪದವಾದುದೇ ಸರಿ! ನನ್ನನ್ನು ಶೂಲಕ್ಕೇರಿಸಿ ತಾವು ಸುಲ್ತಾನರ ಮೇಲಿನ ಸೇಡು ತೀರಿಸಿಕೊಳ್ಳಬಹುದು. ನನ್ನ ದೇಹದಲ್ಲಿ ಪ್ರಾಣವಿರುವ ತನಕ-ಶರೀರದಲ್ಲಿ ರಕ್ತದ ಹನಿಯಿರುವತನಕ ನಾನು ಸುಲ್ತಾನರ ಸೇವಕ!

ಪಾಳೆಯಗಾರರೊಬ್ಬರಿದ್ದು- ನವಾಬಸಾಹೇಬರೇ! ಇವರು ನಮ್ಮ ನಗರದ ಸೀಮೆಗೆ ಬಂದು ಬಹಳ ಘಾತುಕ ಕೃತ್ಯಗಳನ್ನು ಮಾಡಿದಾರೆ. ಇವರ ಸೈನಿಕರು ನಮ್ಮ ಸೀಮೆಯ ಮಹಿಳೆಯರ ಮೇಲೆ ಅತ್ಯಾಚಾರ ಮಾಡಿದ್ದಾರೆ. ಕೊಳ್ಳೆ ಹೊಡೆದಿದಾರೆ. ಇದಕ್ಕೆಲ್ಲಾ ಇವರಿಗೆ ಶಿಕ್ಷೆಯಾಗಲೇಬೇಕು. ಇವರನ್ನು ಗಲ್ಲಿಗೇರಿಸಬೇಕು-ಎಂದರು.

ಹುಸೇನಖಾನನು ಮುಂದೆ ಬಂದು- ಖಾವಿಂದ್! ಸುಲ್ತಾನರು ನಮ್ಮ ಅಣ್ಣನಾದ ಖಾಸಿಂಖಾನರನ್ನು ಅನ್ಯಾಯವಾಗಿ ಕೊಲ್ಲಿಸಿದಾರೆ. ಅದಕ್ಕೆ ಮುಖ್ಯ ಕಾರಣರು ಈ ಸೇನಾಧಿಪತಿಗಳೇ! ಇವರನ್ನು ಶೂಲಕ್ಕೇರಿಸಲೇ ಬೇಕು. ಅಂದಿನ ಯುದ್ಧದಲ್ಲಿ ನಾವು ಸೆರೆ ಸಿಕ್ಕಿದ್ದರೆ ಸುಲ್ತಾನರು ದಯೆ ತೋರಿಸುತ್ತಿದ್ದರೇನು? ನಮ್ಮ ಶಕ್ತಿಯನ್ನು ಸುಲ್ತಾನರಿಗೆ ತೋರಲೇಬೇಕು ಎಂದನು. ಎಲ್ಲರ ಕಣ್ಣುಗಳೂ ನವಾಬರ ಕಡೆಗೆ ರೆಪ್ಪೆ ಹೊಡೆಯದೇ ನೋಡುತ್ತಿದ್ದುವು. ಜಲಾಲುದ್ದೀನರು ಸ್ಥಿರವಾಗಿ ನಿಂತಿದ್ದರು. ಇಯಜ್ ಖಾನನು - ಹುಸೇನಖಾನ್! ಆ ಸೇನಾಧಿಪತಿಗಳ ಸರಪಳಿಯನ್ನು ಬಿಚ್ಚು ಎಂದು ಆಜ್ಞಾಪಿಸಿದನು. ತಕ್ಷಣವೇ ಸರಪಣಿಗಳು-ಬಿಚ್ಚಲ್ಪಟ್ಟವು.

ಸೇನಾಪತಿಗಳ ಶ್ರೇಣಿಯಲ್ಲಿ ಅವರಿಗೊಂದು ಸ್ಥಾನವನ್ನು ಕೊಡುವಂತೆ ಅಪ್ಪಣೆಯಾಯಿತು. ಹುಸೇನಖಾನರ ಪಕ್ಕದಲ್ಲಿಯೇ, ಜಲಾಲುದ್ದೀನರನ್ನು ಕುಳ್ಳಿರಿಸಿದರು.

ವಿಮುಖರಾಗುತ್ತಿದಾರೆ. ಹಿಂದೂ ಸರದಾರರಿಗೆಲ್ಲಾ ಮೈಸೂರಿಗೆ-ಹಿಂದೂ ರಾಜರೇ ಇರಬೇಕೆಂದೂ ಇಲ್ಲಿ ಮುಸಲ್ಮಾನ ರಾಜ್ಯವು ಸ್ಥಾಪಿಸಲ್ಪಡಕೂಡ ದೆಂಬೂ ಅಭಿನಿವೇಶವಿದೆ. ಟಿಪ್ಪೂಸುಲ್ತಾನನನ್ನು ಒಬ್ಬರೂ ನಂಬುವುದಿಲ್ಲ. ಎಲ್ಲ ಕಡೆಯೂ ನಾನಾವಿಧವಾದ ಪಿತೂರಿಗಳಾಗುತ್ತಿವೆ. ಈ ಮೈಸೂರು ರಾಜ್ಯವು ಉಳಿಯುವುದಿಲ್ಲ. ನಾನೇನು ಮಾಡಬಲ್ಲೆ! ನನಗೂ-ಟಿಪ್ಪು ಸುಲ್ತಾನರಿಗೂ ಬದ್ಧ ವೈರ! ನಾನು ಮೈಸೂರು ರಾಜ್ಯಕ್ಕಾಗಿ ಟಿಪ್ಪುವಿನ ಮೇಲೆ ಯುದ್ಧ ಮಾಡುವುದಿಲ್ಲ. ನಾನು ಮೈಸೂರನ್ನು ಪೂರ್ಣವಾಗಿ ಮರತುಬಿಡುತ್ತೇನೆ. ಮಲಬಾರಿನಲ್ಲಿ ನನ್ನದೇ ಒಂದು ರಾಜ್ಯವನ್ನು ನಾನು ಕಟ್ಟುತ್ತೇನೆ ಎಂದು ಆಲೋಚನೆ ಮಾಡುತ್ತಿದ್ದನು. ಅಷ್ಟರಲ್ಲಿ ಗುಪ್ತಚಾರ ನೊಬ್ಬನು ಬಂದು-ನೆಲ ಮುಟ್ಟಿ ಸಲಾಂ ಮಾಡಿದನು. ನಗರದ ಶೀಮೆಗೆ ಜನಾಉದ್ದೀನರನ್ನು ದಿವಾನರಾಗಿ ನೇಮಿಸಿದಾರೆಂದೂ, ನಗರದ ಮೇಲೆ ಯುದ್ಧವನ್ನು ನಿಲ್ಲಿಸಬೇಕೆಂದು ಸುಲ್ತಾನರು ಸಂಕಲ್ಪಿಸಿದಾರೆಂದು ತಿಳಿಸಿ ದನು. ಇಯಜ್‌ಖಾನನಿಗೆ ಏನೋ ಒಂದು ವಿಧವಾದ ಸಮಾಧಾನವಾಯಿತು.

ಇಯಜ್‌ಖಾನನೆದ್ದು ರಾಧಾರಾಣಿಯವರು ಇರುವ ಗುಡಾರಕ್ಕೆ ಪ್ರವೇಶ ಮಾಡಿದನು. ಅಲ್ಲಿ ಪರ್ಯಂಕದ ಮೇಲೆ ರಾಧಾರಾಣಿಯು ಕುಳಿತಿದ್ದಳು. ಸಮೀಪದಲ್ಲಿ ದೌಲತ್ತಳು ಅರ್ಧಶಾಯಿತಾವಸ್ಥೆಯಲ್ಲಿ ಮಂಡಿಸಿದ್ದಳು.

ಇಯಜ್‌ಖಾನನು ಅವರಿಬ್ಬರನ್ನೂ ಮರ್ಯಾದೆಯಿಂದ ವಂದಿಸಿದನು. ರಾಧೆಯು ಪ್ರಸನ್ನಮುಖದಿಂದ ನವಾಬರವರೇ! ದಯಮಾಡಿಸಿರಿ ಎಂದು ಆಸನದ ಕಡೆಗೆ ಕೈತೋರಿಸಿದಳು. ದೌಲತ್ತಳು ಎದ್ದುನಿಂತಳು. ಇಯಜ್ ಖಾನನು ಆಸನದಲ್ಲಿ ಕುಳಿತನು.

ಇಯಜ್‌ಖಾನನು ದೌಲತ್ತಳನ್ನು ಕುಳಿತುಕೊಳ್ಳುವಂತೆ ಪ್ರಾರ್ಥಿಸಿ ದನು. ದೌಲತ್ತಳೂ ಆಸನವನ್ನಲಂಕರಿಸಿದಳು.

ಖಾನನು- ರಾಣಿಯವರೇ! ತಮ್ಮ ದೇಹಸ್ಥಿತಿಯು ಸಂಪೂರ್ಣ ಗುಣ ವಾಗಿದೆಯೆ?

ಇಂದಿನ ರಾತ್ರಿ ಒಂದು ಯುದ್ಧವು ಸಂಭವಿಸುವುದಾದರೆ- ನಾನು ತಯಾರಾಗಿದೇನೆ.

ಖಾನನು- ಸಂತೋಷ! ರಾಣಿಯವರು ಯುದ್ಧ ಮಾಡುವ ಪ್ರಸಂಗ ವೇನೂ ಇಲ್ಲ! ಇದುವರೆಗೆ-ತಾವು ಈ ಗರೀಬನ ರಕ್ಷಣೆಯಲ್ಲಿದ್ದೀರಿ! ನನ್ನ ಬಾಹುಗಳಲ್ಲಿ ತಮ್ಮನ್ನು ಸಂರಕ್ಷಿಸುವ ಶಕ್ತಿ ಇದೆ.

ರಾಧೆ- ನಗುತ್ತಾ ಅಕ್ಕನವರೇ! ನಾನೊಂದು ಮಾತು ಹೇಳಲೇ! ನೀವು ಖಾನರವರಲ್ಲಿ ಅನುರಕ್ತರಾಗಿದೀರಿ!

ದೌಲತ್ತಳು ನಾಚಿಕೆಯಿಂದ ನಕ್ಕಳು ! ಅಕ್ಕನವರೇ! ನೀವು ಇಯಜ್ ಖಾನರವರನ್ನು ಇಲ್ಲಿಯೇ ಇರುವಂತೆ ಮಾಡಬಹುದು.

ಅದು ಹೇಗೆ ?

ನಿಮಗೆ ಅಂಥ ಸಾಮರ್ಥ್ಯವಿದೆ !

ಇಯಜ್‌ಖಾನನು ಸರೋವರದ ಎಡೆಯಲ್ಲಿ ಒಂದು ಅಶ್ವತ್ಥವೃಕ್ಷದ ಕಟ್ಟೆಯಮೇಲೆ ನಿರ್ವಿಣ್ಣನಾಗಿ ಕುಳಿತಿದಾನೆ. ಎಷ್ಟೋ ಕಲ್ಪನಾಸಾಮ್ರಾಜ್ಯಗಳನ್ನು ಸ್ವಪ್ನ ಕಾಣುತ್ತಿದಾನೆ. ನಾಳೆ ಪ್ರಾತಃಕಾಲ ಈ ಶಿಬಿರವನ್ನು ಎತ್ತಲು ಏರ್ಪಾಡು ಮಾಡಿದಾನೆ. ಮೂರು ನಾಲ್ಕು ದಿನಗಳಿಂದ ಎಷ್ಟೋ ಸಮಾಧಾನ ಹೇಳಿ ರಾಧಾ ಮತ್ತು ದೌಲತ್ತರನ್ನು ದರಿಯಾಬಾಗಿಗೆ ಹೋಗಲು ಒಪ್ಪಿಸಿದಾನೆ. ತಾನು ಎಲ್ಲಿಯೋ ಹೊರಟುಹೋಗಲು ಸಂಕಲ್ಪಿಸಿದಾನೆ. ಆದರೆ ಇಯಜ್‌ಖಾನನು ಎಲ್ಲಿಗೆ ಹೋಗುತ್ತಾನೆಂಬುದು ಯಾರಿಗೂ ಗೊತ್ತಿಲ್ಲ ! ಅದನ್ನು ತಿಳಿದುಕೊಳ್ಳಲು ರಾಧೆಯು ಎಷ್ಟೋ ಪ್ರಯತ್ನಪಟ್ಟಳು. ಫಲಿಸಲಿಲ್ಲ. ಹುಸೇನ್‌ಖಾನನು ಹೆಣಗಾಡಿದನು. ಅದನ್ನು ತಿಳಿಯಲು ಸಾಧ್ಯವಾಗಲಿಲ್ಲ. ಅವನು ಗುಪ್ತವೇಷದಿಂದ ಇಯಜ್‌ಖಾನರನ್ನು ಹಿಂಬಾಲಿಸುವುದಾಗಿ ನಿಶ್ಚಯಮಾಡಿಕೊಂಡಿದಾನೆ. ಇಯಜ್‌ಖಾನನು ಅಶ್ವತ್ಥಕಟ್ಟೆಯ ಮೇಲೆ ಕುಳಿತು ಮುಂದಿನ ರಾಜ್ಯ ಕಟ್ಟುವ ಆಲೋಚನೆಗಳನ್ನು ಮಾಡತೊಡಗಿದಾನೆ. ಆ ಯೋಚನಾತರಂಗಗಳಲ್ಲಿ ದೌಲತ್ತಳ ಜ್ಞಾಪಕವು ಬಂದಿತು. ದೌಲತ್ತಳನ್ನು ಅಗಲಿಹೋಗುವುದು ಬಲು ಕಷ್ಟವಾಗಿ ತೋರಿತು. ದೌಲತ್ತಳು ನಿಜವಾಗಿಯೂ ಖಾನನ ಪ್ರಣಯಿನಿಯೇನು ? ಅಲ್ಲ ! ಆದರೂ ದೌಲತ್ತಳ ಸಾನ್ನಿಧ್ಯವನ್ನು ಬಿಡುವುದು ಅವನಿಗೆ ಬಲು ಕಷ್ಟವಾಗಿ ತೋರಿತು. ದೌಲತ್ತಳಿಗೆ ತನ್ನಲ್ಲಿ ಪ್ರೇಮವಿದೆಯೇ ! ಎಂದು ಚಿಂತಿಸಿದನು. ಪ್ರೇಮವಿದೆ. ಆದರೆ ತಾನು ಅವಳನ್ನು ಇಲ್ಲಿ ಬಿಟ್ಟು ಹೋದರೆ ಟಿಪ್ಪೂ ಸುಲ್ತಾನನು ದೌಲತ್ತಳನ್ನು ಬಲಾತ್ಕಾರದಿಂದಲಾದರೂ ಅಪಹರಿಸುತ್ತಾನೆ. ದೌಲತ್ತಳನ್ನು ತನ್ನ ಜೊತೆಯಲ್ಲಿಯೇ ಕರೆದುಕೊಂಡು ಹೋಗಬಾರದೆ ! ಹೌದು ! ಈ ಆಲೋಚನೆಯು ಸರಿಯಾಗಿದೆ. ದೌಲತ್ತಳು ಮಾತ್ರ ಬರುವುದಿಲ್ಲ ! ಒಂದು ಪಕ್ಷ ದೌಲತ್ತಳು ನನ್ನೊಡನೆ ಬರುವ

ಮಾಡಿರುವಂತಿದೆ. ನನಗೂ ತಿಳಿಸಬಾರದೆ! ಇಯಜ್‌ಖಾನರವರು ನಗರದ ರಾಜ್ಯದ ಮೇಲೆ ಹಲ್ಲಾ ಮಾಡುತ್ತಾರೇನು?

ರಾಧೆ- ನೋಡಿ! ಅಕ್ಕನವರೇ! ನನ್ನ ದುರುಳುತನವನ್ನು ಕ್ಷಮಿಸಿರಿ! ಈ ಇಯಜ್‌ಖಾನನು ವೀರಪುರುಷ! ಇವನ ಸರ್ವನಾಶಕ್ಕೆ ನೀವೇ ಕಾರಣರು. ಖಾನನು ನಿಮಗಾಗಿ ರಾಜ್ಯಪರಿತ್ಯಾಗ ಮಾಡಿದನು. ರಾಜ್ಯ ಕೋಶಗಳನ್ನು ಬಿಟ್ಟಮೇಲೆ ಇಯಜ್‌ಖಾನನು ಈ ವನ ವಾಸಮಾಡುತ್ತಾ ಕಳ್ಳನಂತೆ ತಲೆ ಮರಸಿಕೊಂಡು ಇರಲಾ ರೀತಿ? ವೀರಪುರಷನಂತೆ ಯುದ್ಧಮಾಡಬೇಕು. ಸುಲ್ತಾನನೊಡನೆ ಯುದ್ಧವಾದರೇನು? ಯಾರೊಡನೆ ಯುದ್ಧವಾದರೇನು! ತಪ್ಪು ಸುಲ್ತಾನನದು! ನೀನು ದೊಡ್ಡ ನವಾಬರಲ್ಲಿ ಪ್ರತಿಜ್ಞೆಯನ್ನು ಮಾಡಿದ್ದರೆ-ಸುಲ್ತಾನನ ಸಮ್ಮುಖಕ್ಕೆ ಹೋಗಿ ಅವನನ್ನು ಪ್ರಾರ್ಥಿಸಿ-ನಗರಕ್ಕೆ ಬಾರದಂತೆ ತಡೆಯಬೇಕಾಗಿತ್ತು! ಅದಕ್ಕೆ ಪ್ರತಿಯಾಗಿ ಇಯಜ್‌ಖಾನನ ಆ ತ್ಯಾಗಕ್ಕೆ ನೀನಿತ್ತ ಪುರಸ್ಕಾರವೇನು?

ದೌಲತ್ ರಾಣಿಯವರೇ! ಆ ಸುಲ್ತಾನನಲ್ಲಿ ಹೋಗಿ ಆತನನ್ನು ತಡೆಗಟ್ಟಲು-ನಿಮಗೆ ಭಯ! ಆ ಸುಲ್ತಾನನು ನಿನ್ನ ಈ ಸ್ತ್ರೀ ರೂಪಕ್ಕೆ ಮರುಳಾಗಿರುವ ಪತಂಗ! ಅದಕ್ಕೆ ತಕ್ಕಹಾಗೆ ನೀನು ಭಯಪಡುತ್ತಿ. ನಾನು ಹೆಣ್ಣಲ್ಲವೇನು? ನನಗೆ ಆ ಮೋಹಕ ರೂಪವಿಲ್ಲವೇನು? ನಾನು ಏಕಾಂಗಿಯಾಗಿ ನೂರುಬಾರಿ ಸುಲ್ತಾನನ ಶಿಬಿರಕ್ಕೆ ಹೋಗಿ ಬರಬಲ್ಲೆ! ನೀನೇಕೆ ಹೆದರುತ್ತಿ! ಹೀಗೆ ಪುರುಷರ ಸಮೀಪಕ್ಕೆ ಹೋಗಲು-ಅಂಜುವ ಹೆಂಗಳು ರಾಜಕೀಯಕ್ಕೆ, ಯುದ್ಧ ವಿಗ್ರಹಗಳಿಗೆ ಅರ್ಹರಲ್ಲ! ನೀನು ಯಾರನ್ನಾದರೂ ಮದುವೆಯಾಗಿ ಸಂಸಾರಿಯಾಗಿರಬಾರದೇ!

ರಾಧಾರಾಣಿಯವರೇ! ಇಂದು ಒಳ್ಳೇ ಸುಪ್ರಭಾತ! ಉದ್ರಿಕ್ತರಾಗಿ ಬಂದಿದ್ದೀರಿ. ನನ್ನನ್ನು ಸಂಸಾರಿಯಗುವಂತೆ ಪ್ರೇರೇಪಿಸುತ್ತಿದ್ದೀರಿ! ನಡಿಯಿರಿ ಮಶೀದಿಗೆ ಹೋಗುವ! ನಾನು ನಿಮ್ಮನ್ನೇ ಮದುವೆಯಾಗುತ್ತೇನೆ. ಇಂದಿನಿಂದ ನಾನು ರಾಧಾರಾಣಿಯವರ ಧರ್ಮಪತ್ನಿ! ಯಾವ ಪುರುಷನು ತಾನೇ ನಿಮ್ಮಷ್ಟು ಪರಾಕ್ರಮಶಾಲಿಯಾಗಿರುವನು!

ದೌಲತ್! ನೀನು ಹುಚ್ಚಳಂತೆ ಮಾತನಾಡುತ್ತಿ. ನನ್ನನ್ನೇಕೆ ಮದುವೆಯಾಗುವೆ. ನಿನ್ನಲ್ಲಿ ಇಬ್ಬರು ಮಹಾಪುರುಷರು ಅನುರಕ್ತರಾಗಿದಾರೆ. ಸುಲ್ತಾನರೊಬ್ಬರು-ಈ ಖಾನರವರೊಬ್ಬರು. ಯಾರಾದರೊಬ್ಬರನು

ಸ್ವಯಂವರ ಮಾಡಿಕೊಂಡು ಸುಖವಾಗಿರಬಾರದೇ!

ರಾಧಾರಾಣಿಯವರೇ! ನಾನೊಬ್ಬ ಪುರುಷನನ್ನು ವರಿಸಿ ಸಂಸಾರಿಯಾದರೆ ನೀವೇನು ಮಾಡುವಿರಿ!

ರಾಧೆ- ನಾನು ವಿಂಧ್ಯಾಟವಿಗೆ ಹೋಗಿ ವಿಂಧ್ಯವಾಸಿನಿಯ ಆರಾಧನೆ ಮಾಡುತ್ತಾ ಈ ಜನ್ಮವನ್ನು ಸುಖವಾಗಿ ಕಳೆಯುವೆನು!

ರಾಧಾರಾಣಿಯವರೇ! ಮತ್ತ್ತಾನು ನನಾತು! ತಾವು ಸನ್ಯಾಸಿನಿಯಾಗಿ ಕೊಳ್ಳಲು ಪ್ರತಿಬಂಧಕವೇನಿದೆ?

ನನ್ನ ಜನ್ಮದಲ್ಲಿಯೇ ಪ್ರತಿಬಂಧಕವಿದೆ. ಜ್ಯೋತಿಷ್ಯರು ನನ್ನ ಜಾತಕವನ್ನು ಗುಣಿಸಿ ನಾನೊಬ್ಬ ಹಿಂದು ಸಾರ್ವಭೌಮನ ಪಟ್ಟಮಹಿಷಿಯಾಗಬೇಕು. ಇಲ್ಲವೇ ಆಮರಣಾಂತ ಸನ್ಯಾಸಿಯಾಗಿ ಮಹಾದೇವಿಯ ಆರಾಧಕಳಾಗಿ ಜನ್ಮ ಸಾರ್ಥಕಮಾಡಿಕೊಳ್ಳಬೇಕು. ವಿಜಯನಗರವು ಅಸ್ತವಾದ ಮೇಲೆ ಹಿಂದೂ ಸಾರ್ವಭೌಮನೆಲ್ಲಿ ಬರಬೇಕು. ನಾನು ಸನ್ಯಾಸಿಯಾಗುತ್ತೇನೆಂದು ಬಾಲ್ಯದಿಂದಲೂ ತಯಾರಾಗಿದ್ದೇನೆ. ದೌಲತ್! ವ್ಯರ್ಥ ಕಾಡು ಹರಟೆಯಲ್ಲಿ ಕಾಲ ಕಳೆಯಬೇಡ! ಇಂದು ನಮಗೆ ಬಹಳ ಅವಸರವಿದೆ! ಏಳು! ಸಿದ್ಧಳಾಗು! ಹೊರಡುವ!

ರಾಧಾರಾಣಿಯವರೇ! ಇಂದು ಯಾವ ಮಹತ್ಕಾರ್ಯಕ್ಕೆ ಎಲ್ಲಿಗೆ ಪ್ರಯಾಣವೆಂಬುದನ್ನು ನನಗೆ ಹೇಳಕೂಡದೆ!

ಹೇಳದೇ ಏನು? ಹೇಳುವುದಕ್ಕಾಗಿಯೇ ಬಂದಿದೇನೆ. ಅದನ್ನು ಕೇಳಿ ಸಹಿಸುವ ಶಕ್ತಿಯು ನಿನಗೆ ಇದೆಯು?

ದೌಲತ್-ರಾಧಾರಾಣಿ! ಫಿರಂಗಿಯ ಬಾಯಿಗೆ ಎದೆಗೊಡುವ ಶಕ್ತಿಯು ನನಗಿದೆ? ಹೇಳಿರಿ!

ಈ ದಿನ ಸೂರ್ಯೋದಯವಾಗುವುದರೊಳಗಾಗಿ ಇಯುಜ್‌ಖಾನನು ದೇಶತ್ಯಾಗ ಮಾಡುತ್ತಾನೆ! ನಾವು ಅವನನ್ನು ಹಿಂಬಾಲಿಸಿ ಸ್ವಲ್ಪ ದೂರ ಸಾಗುಗಳಿಸಿ ಬರಬೇಕು.

ದೌಲತ್- ಓಹೋ! ಇಯುಜ್‌ಖಾನರು ದೇಶತ್ಯಾಗ ಮಾಡುವುದನ್ನು ತಾವು ಒಪ್ಪಿದ್ದೀರೇನು?

ರಾಧೆ- ಹೌದು ಒಪ್ಪಿದ್ದೇನೆ. ಖಾನನು ರಾಜ್ಯತ್ಯಾಗ ಮಾಡಿದಾನೆ. ಇಲ್ಲಿ ಕಳ್ಳನಂತೆ ತಲೆ ಮರೆಸಿಕೊಂಡು ಇರಕೂಡದು. ಖಾನನು ವೀರ

ದುರಂತವಾದ ಆಸೆ ಇಟ್ಟುಕೊಂಡಿದಾನೆ. ದೌಲತ್ತಳ ಮೇಲಿನ ಮೋಹದಿಂದಲೇ ಇಷ್ಟೊಂದು ಸಾಹಸ ಮಾಡಿದನು. ದೌಲತ್ತಳನ್ನು ಭೇಟಿಮಾಡಿ ಪ್ರಣಯಭಿಕ್ಷೆಯನ್ನು ಬೇಡಿದನು. ಬಲಾತ್ಕಾರದಿಂದಲಾದರೂ ದೌಲತ್ತಳನ್ನು ವಶಪಡಿಸಿಕೊಳ್ಳಲು ಸುಲ್ತಾನನು ಕಾತುರನಾಗಿದಾನೆಂದು ರಾಧೆಯು ಭಾವಿಸಿದ್ದಳು. ಇಂದಿನ ಪ್ರಸಂಗವು ಇದೆಲ್ಲಕ್ಕೂ ವಿರುದ್ಧವಾಗಿದೆ.

ಸುಲ್ತಾನನು ದೌಲತ್ತಳ ಮೇಲಿನ ಆಸೆಯನ್ನೇ ತೂರಿಬಿಟ್ಟನೇ? ಅಥವಾ ಮಾರ್ಗಾಂತರವನ್ನು ಅನುಸರಿಸಿ ದೌಲತ್ತಳನ್ನು ವಲಿಸಿಕೊಳ್ಳಬೇಕೆಂದು ಸಂಕಲ್ಪಿಸಿದಾನೆಯೋ-ಇದೊಂದೂ ರಾಧಾರಾಣಿಗೆ ಅರ್ಥವಾಗಲಿಲ್ಲ. ಇದೊಂದು ಜಟಿಲ ಸಮಸ್ಯೆಯಾಗಿಯೇ ಇದೆ. ಇರಲಿ ! ಎಂದುಕೊಂಡಳು. ಮಾರನೆಯ ದಿನ ಪ್ರಾತಃಕಾಲ ನಗರಾಭಿಮುಖವಾಗಿ ಹೊರಟಳು. ಮೂರು ನಾಲ್ಕು ದಿನಗಳಲ್ಲಿ ನಗರವನ್ನು ಸೇರಿದಳು. ಇಯಜ್‌ಖಾನನ ಶಿಬಿರಕ್ಕೆ ಹೋಗಿ ಇಯಜ್‌ಖಾನನ್ನೂ ದೌಲತ್ತಳನ್ನೂ ಕಂಡು ಸುಲ್ತಾನನ ಶಿಬಿರದಲ್ಲಿ ನಡೆದ ವೃತ್ತಾಂತವೆಲ್ಲವನ್ನೂ ಯಥಾವತ್ತಾಗಿ ತಿಳಿಸಿದಳು. ಇದರಲ್ಲಿ ಏನೂ ಕುತಂತ್ರವಿಲ್ಲವೆಂದೂ ಇಯಜ್‌ಖಾನನು ನಗರದ ನವಾಬಗಿರಿಯನ್ನು ಒಪ್ಪಿಕೊಳ್ಳಬೇಕೆಂದೂ ಒತ್ತಾಯಪಡಿಸಿದಳು. ಟಿಪ್ಪೂಸುಲ್ತಾನನು ತನ್ನ ಕೈಯ್ಯಲ್ಲಿ ಕೊಟ್ಟಿದ್ದ ಪತ್ರವನ್ನು ಖಾನನ ಕೈಯ್ಯಲ್ಲಿ ಒಪ್ಪಿಸಿದಳು. ಖಾನನು ಮೊಹರನ್ನು ಒಡೆದು ಲಕೋಟೆಯನ್ನು ಬಿಚ್ಚಿ ಆ ಪತ್ರವನ್ನು ಓದಿಕೊಂಡನು. ಮತ್ತೊಮ್ಮೆ ಓದಿದನು. ಅವನಿಗೆ ಆಶ್ಚರ್ಯವಾಯಿತು. ಟಿಪ್ಪೂಸುಲ್ತಾನನು ಎಂತಹ ರಾಜನೀತಿ ವಿಶಾರದ. ಎಂದು ಮೆಚ್ಚಿಕೊಂಡನು. ದೌಲತ್ ಮತ್ತು ರಾಧಾರಾಣಿಯುವರಿಗೆ ಆ ಪತ್ರದ ಒಕ್ಕಣೆಯನ್ನು ಓದಿ ಹೇಳಿದನು.

ನಗರದ ನವಾಬರಾದ ಇಯಜ್‌ಖಾನರವರೇ !

ನಾನು ಈ ಪತ್ರವನ್ನು ಪ್ರೀತಿಯಿಂದ ಬರೆಯುತ್ತಿದೇನೆ. ದೊಡ್ಡ ನವಾಬರ ಪಾದದ ಮೇಲೆ ಆಣೆಯಿಟ್ಟು ಇದರಲ್ಲಿ ಉಲ್ಲೇಖಿಸಿರುವ ಅಂಶಗಳೆಲ್ಲಾ ಅಲ್ಲಾವಿನಷ್ಟು ಸತ್ಯವಾದುವುಗಳೆಂದು ಹೇಳುತ್ತೇನೆ. ಮೈಸೂರು ರಾಜ್ಯಕ್ಕೆ ಪ್ರತಿದಿನವೂ ಶತ್ರುಗಳ ಭಯವಿದೆಯೆಂಬುದು ತಮಗೆ ತಿಳಿದೇ ಇದೆ. ಅದಕ್ಕಾಗಿ ಭದ್ರವಾದ ಸೇನೆಯನ್ನು ಕಟ್ಟಬೇಕು. ಆ ಸೇನೆಯ ರಚನೆಗೆ ಕೋಟ್ಯಾಂತರ ರೂಪಾಯಿಗಳು ಬೇಕು. ದೊಡ್ಡ ನವಾಬರವರು ಇದಕ್ಕಾಗಿಯೇ, ನಗರದಲ್ಲಿ ಸ್ವರ್ಣನಿಧಿಯನ್ನಿಟ್ಟುಕೊಂಡಿದಾರೆಂದೂ, ಅದರ ರಕ್ಷೆ

ಮೈಸೂರು ರಾಜ್ಯಕ್ಕೆ ವಿರುದ್ಧವಾಗಿ ಎತ್ತಿಕಟ್ಟಬಹುದೆಂದು ಆಲೋಚಿಸಿದಳು.

ಷಾ- ಹುಸೇಲ್‌ಖಾನ್, ನಿಮ್ಮ ಜನರ ಮೇಲೆ ನಡೆಯುತ್ತಿರುವ ಅನ್ಯಾಯ ಅತ್ಯಾಚಾರಗಳನ್ನು ಕಣ್ಣಾರ ನೋಡಿ ಏನೂ ಮಾಡಲಾರದೇ ಇದ್ದೀಯಾ ?

ಹು-ಖಾನ್- ಬೇಗಂ ಸಾಹೇಬರವರೇ, ನಾನೇನು ಮಾಡಬಲ್ಲೆ! ನಾನು ಸುಲ್ತಾನರಲ್ಲಿಗೆ ಹೋಗಿ ಎಲ್ಲವನ್ನೂ ಹೇಳಿ ದಾವಾಮಾಡಬಹುದು. ಆ ಸುಲ್ತಾನರನ್ನು ಕಂಡರೆ ನನಗೆ ದ್ವೇಷ! ಅವರಿಗೆ ಏನಾದರೊಂದು ಪ್ರಬಲ ವಿರೋಧವನ್ನು ಎಸಗಬೇಕೆಂದು ಸಂಕಲ್ಪಿಸಿದ್ದೇನೆ. ನಾನು ಅವರ ದರಬಾರಿಗೆ ಹೇಗೆ ಹೋಗಲಿ !

ಬೇಗಂ- ನಿಜವಾಗಿ ನೀನು ಸುಲ್ತಾನರಿಗೆ ಪ್ರತಿಕ್ರಿಯೆ ಮಾಡುವವನಾಗಿದ್ದರೆ, ಇದೇ ಸಂದರ್ಭವನ್ನು ಉಪಯೋಗಿಸಿ, ಮಂಗಳೂರನ್ನು ಆಕ್ರಮಣ ಮಾಡಬಾರದೇಕೆ ? ಈಗಿನ ಕಾಲದಲ್ಲಿ ಎಲ್ಲೆಲ್ಲಿಯೂ ವಿಪ್ಲವಗಳಾಗುತ್ತಿವೆ. ಯುದ್ಧದಲ್ಲಿ ನೀನೊಬ್ಬ ಪರಾಕ್ರಮಶಾಲಿಯಾದ ಸೇನಾನಾಯಕ. ರಾಜರ ಲಕ್ಷಣಗಳೆಲ್ಲಾ ನಿನ್ನಲ್ಲಿವೆ. ನೀನು ದಕ್ಷಿಣ ಕನ್ನಡದ ಸ್ವಯಂ ರಾಜನಾಗಬಾರದೇಕೆ ?

ಹುಸೇನ್- ಬೇಗಂಸಾಹೇಬ, ನಾನು ಸೈನ್ಯವನ್ನು ಕಟ್ಟಬಲ್ಲೆ. ಕ್ಷಿಪ್ರದಲ್ಲಿಯೇ ಮಂಗಳೂರನ್ನು ಆಕ್ರಮಿಸಬಲ್ಲೆ. ಫರಂಗಿಯವರು ಯಾವಾಗಲೂ ಅದರ ಮೇಲೆ ಕಣ್ಣಿಟ್ಟಿದ್ದಾರೆ. ಅದರಿಂದ ಅದನ್ನು ರಕ್ಷಿಸುವುದು ಹೇಗೆ ?

ಬೇಗಂ- ಅಂಥಾ ಸಂದರ್ಭದಲ್ಲಿ ನಗರದ ಪಾಳೆಯಗಾರರು ನಿನಗೆ ಸಹಾಯ ಮಾಡಲಾರರೆ ? ನೋಡು ! ಹುಸೇನ್‌ಖಾನ್, ಸೈನ್ಯವನ್ನು ಕಟ್ಟಿ ಮಂಗಳೂರನ್ನು ಹಿಡಿದರೆ, ಟಿಪ್ಪೂ ಸುಲ್ತಾನನಿಗೆ ಬಲವಾದ ಪೆಟ್ಟು ಕೊಟ್ಟಂತಾಗುವುದು. ಇಯಜ್‌ಖಾನರವರಿಗೂ ಅದರಿಂದ ಬಹಳ ಸಂತೋಷವಾಗಬಹುದು. ನಿನ್ನಂಥಾ ಪರಾಕ್ರಮಶಾಲಿಗಳು ಅಂಥದೊಂದು ಪೌರುಷ ಕಾರ್ಯವನ್ನು ಮಾಡಲೇಬೇಕು. ಮಹಮ್ಮದಾಲಿಯವರು ಎಷ್ಟೋ ಬಾರಿ ಹೇಳುತ್ತಿದ್ದರು. ಪರಾಕ್ರಮಶಾಲಿಯಾದ ಪುರುಷನು ಒಂದು ಮಹತ್ಕಾರ್ಯವನ್ನು ಮಾಡಿಬಿಟ್ಟರೆ, ಭಗವಂತನು ಅವನಿಂದ ಅನೇಕ ಮಹತ್ಕಾರ್ಯಗಳನ್ನು ಮಾಡಿಸುತ್ತಾನೆಂದು ! ದೊಡ್ಡ ನವಾಬರು ನಿನ್ನ ಹಾಗೆಯೇ ಸಣ್ಣ ಸೇನಾಧಿಪತಿಗಳಾಗಿದ್ದವರು, ಇಷ್ಟೊಂದು

ಪೀಡಿತರಾಗಿದಾರೆ. ಮಳೆ ಬೆಳೆಗಳೇ ಇಲ್ಲ. ದೇಶದಲ್ಲಿ ಎಲ್ಲೆಲ್ಲಿಯೂ ಕೊಳ್ಳೆ ದರೋಡೆ ಕಳವುಗಳು ನಡೆಯುತ್ತಿವೆ. ಇವಕ್ಕೆಲ್ಲಾ ಉತ್ತರದ ಕಡೆಯಿಂದ ಬಂದಿದ್ದ ಜಂಗಮಯ್ಯಗಳೇ ಕಾರಣ. ಅವರೆಲ್ಲರನ್ನೂ ಪತ್ತೆಮಾಡಿಸಿ, ಹಿಡಿತರಿಸಿ ಸರಿಯಾದ ಶಿಕ್ಷೆ ಮಾಡಿಸಿದೆ. ಇನ್ನೂ ಈ ಪ್ರಾಂತ ಜಂಗಮಯ್ಯಗಳು ತಲೆ ಇಡದೇ ಮಾಡಿದ್ದೇನೆ. ದಕ್ಷಿಣ ಕನ್ನಡವು ಶಾಂತಿಗೆ ಬಂದಂತೆಯೇ ಸರಿ। ಎಂಬುದಾಗಿ ಬರೆಸಿ ಇಲ್ಲಿಯ ಸಂಗತಿಗಳೆಲ್ಲವನ್ನು ವಿವರಿಸುವಂತೆ ರಾಜಕರ್ಮಚಾರಿಗಳನ್ನು ಕಳುಹಿಸಿಕೊಟ್ಟನು.

## ವಿಪ್ಲವದ ಮೂಲಪುರುಷನು
## ಭಕ್ಷಿಯೋ-ಫಕೀರನೋ

ವಿಪ್ಲವದಸ್ವರೂಪವೇ ಹೀಗೆ! ಯಾರೋ ವಿಪ್ಲವದ ಬೀಜಗಳನ್ನು ಬಿತ್ತುತ್ತಾರೆ ಅವು ಎಲ್ಲಿಯೋ ಮೊಳೆಯುತ್ತವೆ. ಎಲ್ಲಿಯೋ ಶಾಖೆಗಳು ಕಾಣಿಸಿಕೊಳ್ಳುತ್ತವೆ. ಯಾವುದೋ ರೂಪಾಂತರಗಳನ್ನು ತಾಳುತ್ತವೆ. ಭಕ್ಷಿಯು ಯಾವುದೋ ರೂಪದಲ್ಲಿ ಬಿತ್ತಿದ ಈ ವಿಪ್ಲವ ಬೀಜವು ಜಂಗಮರ ಬಂಡಾಯದ ರೂಪವನ್ನು ತಾಳಿ ಜಂಗಮರ ವಧೆಯಲ್ಲಿ ಪರ್ಯವಸಾನವಾಯಿತು. ಭಕ್ಷಿಯು ಇವನ್ನೆಲ್ಲಾ ಜಾಗರೂಕತೆಯಿಂದ ಕಾಯುತ್ತಿದ್ದನು. ಈಗ ಕೆಂಪಂಗಿಯ ಭಟರು ಹತ್ತುಸಾವಿರ ಮಂದಿ ಇದ್ದಾರೆ. ಇವರಿಗೆಲ್ಲಾ ದಿರಸಿದೆ. ದೊಣ್ಣೆಗಳಿವೆ. ಕಠಾರಿಗಳಿವೆ. ಎಷ್ಟೋಜನರಲ್ಲಿ ಒಳ್ಳೇಕತ್ತಿಗಳಿವೆ. ಸಾವಿರಾರು ಬಂದೂಕಗಳಿವೆ. ಭಕ್ಷಿಯು ಯಾವಕ್ಷಣದಲ್ಲಿ ಬೇಕೆಂದರೆ ಆ ಕ್ಷಣ ಮಂಗಳೂರನ್ನು ಹಿಡಿಯಬಹುದು. ಇಯಜ್‌ಖಾನರು ಹೊಸದೊಂದು ರಾಜ್ಯವನ್ನು ಕಟ್ಟುವುದಾಗಿ ಶಪಥಮಾಡಿದ್ದಾರೆ. ನಾನು ಇಲ್ಲಿ ಹೊಸರಾಜ್ಯವನ್ನು ಸಿದ್ಧ ಮಾಡಿದೇನೆ. ಅವರು ಇಲ್ಲಿಗೆ ದರ್ಶನವಿತ್ತರೆ ಒಂದೇ ದಿನದಲ್ಲಿ ಈ ಕೊಂಕಣ ರಾಜ್ಯವನ್ನು ಹಿಡಿದು ಅವರಿಗೆ ಒಪ್ಪಿಸಬಲ್ಲೆ! ಎಂದುಕೊಳ್ಳುತ್ತಿದ್ದನು.

ಕುತುಬುದ್ದೀನನು ಬಲು ಬುದ್ಧಿವಂತ! ಈಗ ಅವನ ಕಣ್ಣು ಮುಂದೆ ವಿಪ್ಲವವು ಚೆನ್ನಾಗಿ ಕಾಣುತ್ತಿದೆ. ಇದು ಕ್ಷಾಮವಲ್ಲ. ಜಂಗಮರ ಬಂಡಾಯವೂ ಅಲ್ಲ. ಇದೆಲ್ಲಾ ಕೆಂಪಂಗಿಯ ತರುಣರ ಹಾವಳಿಯೇಸರಿ! ಇವರಿಗೆಲ್ಲ ಆಯುಧಗಳಿವೆ. ದಿರಸು ಇದೆ. ಪ್ರಬಲವಾದ ಒಗ್ಗಟ್ಟಿದೆ. ನಾವು ಇವರನ್ನು

ತನ್ನ ಮನೆಗೆ ಬಂದು ಫಾತಿಮಾಬೇಗಂರವರಿಗೊಂದು ಪತ್ರಬರದನು. ಗೋಪಾಲನನ್ನೂ ಇಮಾಂನನ್ನೂ ಕರೆದು ನೀವು ಒಂದು ಮಹತ್ಕಾರ್ಯವನ್ನು ಮಾಡಬೇಕಾಗಿದೆ. ನೀವುಗಳು ಫಕೀರರ ವೇಷವನ್ನು ಹಾಕಿಕೊಂಡು ನಗರಕ್ಕೆ ಹೋಗಬೇಕು.

ಅಲ್ಲಿ ದರಿಯಾಬಾಗಿನಲ್ಲಿ ಮಹಮ್ಮದಾಲಿಯವರ ಗೋರಿ ಇದೆ. ಆ ಗೋರಿಯ ಸಮೀಪದಲ್ಲಿ ಬೇಗಂ ಸಾಹೇಬರು ಒಬ್ಬರು ಇರುತ್ತಾರೆ. ಈ ಪತ್ರವನ್ನು ಅವರಿಗೆ ತಲಪಿಸಬೇಕು. ಅವರು ಹಣ ಕೊಡುತ್ತಾರೆ. ಅದನ್ನು ಜಾಗರೂಕತೆಯಿಂದ ತರಬೇಕು. ಬಹಳ ಹುಷಾರಿ ಇರಬೇಕು. ಈ ಪತ್ರವು ಯಾರ ಕೈಗಾದರೂ ದೊರೆತರೆ ಪ್ರಮಾದವಾಗುವುದು! ಎಂದು ಹೇಳಿದನು. ಅವರು ಪ್ರಯಾಣಕ್ಕೆ ಸಿದ್ಧರಾಗಿ ತೆರಳಿದರು.

ಮಾರನೆಯದಿನವೇ ಈ ಇಬ್ಬರು ರಾಯಭಾರಿಗಳೂ ದರಿಯಾಬಾಗನ್ನು ಸೇರಿದರು. ಬೇಗಂಸಾಹೇಬರ ಭೇಟಿ ಮಾಡಿದರು. ಅವರ ಕೈಗೆ ಆ ಪತ್ರವನ್ನು ಕೊಟ್ಟರು. ಬೇಗಂಸಾಹೇಬರು ಯಾರದು ಪತ್ರ! ಎಂದು ಕೇಳಿದರು. ಗೋಪಾಲನು ಮಹಾರಾಣಿಯವರೇ ಅದು ಭಕ್ತಿಯುಳ್ಳವರದು ಎಂದನು

ಬೇಗಂಸಾಹೇಬ್– ಭಕ್ತಿಯುಳ್ಳವರಾರು?

ಸನ್ನಿಧಾನದ ಸಹೋದರರಂತೆ!

ಬೇಗಂ ಸಾಹೇಬಳು ಮನಸ್ಸಿನಲ್ಲಿಯೇ ಈ ಜಗತ್ತಿನಲ್ಲಿ ನನಗಾರೂ ಇಲ್ಲ! ಈ ನನ್ನ ಸಹೋದರನು ಯಾರಿರಬಹುದು? ಯಾರಾದರೇನು? ಪತ್ರವನ್ನು ನೋಡುವುದಕ್ಕೆ ಆಕ್ಷೇಪಣೆಯೇನು? ಎಂದುಕೊಂಡು ಲಕೋಟೆಯನ್ನು ಬಿಚ್ಚಿ ಓದಿ ನೋಡಿಕೊಂಡಳು. ನಕ್ಕಳು! ಹೌದು! ಇವರು ನನ ಸಹೋದರರು ಎಂದಳು.

ಪತ್ರವು ಈ ಪರಿಯಾಗಿತ್ತು!

ರಾಣೀಸಾಹೇಬ:—

ಮಹಮ್ಮದಾಲಿಯವರ ಸಮಾಧಿಯಲ್ಲಿ ತಾವು ರಾಜ್ಯವನ್ನು ಕಟ್ಟಬೇಕೆಂದು ಪ್ರೇರೇಪಿಸಿದಿರಿ. ನಾನು ಈ ಕರ್ನಾಟಕದಲ್ಲಿ ರಾಜಕಾರ್ಯವನ್ನು ಆರಂಭಿಸಿದೆ. ಹತ್ತು ಸಹಸ್ರ ಸೈನ್ಯವನ್ನು ಕಟ್ಟಿದೇನೆ. ಈ ದಕ್ಷಿಣ ಕನ್ನಡದಲ್ಲಿ ಒಂದೇದಿನದಲ್ಲಿ ಸುಲ್ತಾನೀರಾಜವನ್ನು ಕೊನೆಮುಟ್ಟಿಸಬಲ್ಲೆ. ಇಲ್ಲಿ ಸುಲ್ತಾನೀ ರಾಜ್ಯವಿಲ್ಲ. ಇದು ನನ್ನ ರಾಜ್ಯ. ಇಲ್ಲಿ ಸುಲ್ತಾನರ ಪ್ರತಿನಿಧಿ ಒಬ್ಬ ಫೌಜು

ಇಂಗ್ಲಿಷರ ಕೋಠಿಗಳ ವ್ಯಾಪಾರಕ್ಕಿಂತಲೂ, ಅವನ ವ್ಯಾಪಾರವು ಬಹಳ ಪ್ರವೃದ್ಧಮಾನವಾಗಿತ್ತು! ಇಂಗ್ಲಿಷರು ಈಗ ರಾಜ್ಯ ಸ್ಥಾಪನೆಯಲ್ಲಿ ತೊಡಗಿದ್ದಾರೆ. ಅವರಿಗೆ ಅಷ್ಟು ವ್ಯಾಪಾರದಲ್ಲಿ ಆಸಕ್ತಿ ಇಲ್ಲ. ಇಂಗ್ಲಿಷರು ತಮ್ಮ ಅಲ್ಪ ಸ್ವಲ್ಪ ವ್ಯಾಪಾರವನ್ನು ಖಾನನ ಕೋಠಿಗಳಿಗೇ ವಹಿಸುತ್ತಿದ್ದರು. ಇದಕ್ಕೆ ಮತ್ತೊಂದು ಕಾರಣವಿತ್ತು. ಈ ಕೋಠಿಗಳ ಕಾರ್ಯಕಾರಿಗಳೆಲ್ಲಾ ಬಹುಮಟ್ಟಿಗೆ ಬ್ರಾಹ್ಮಣರು. ಇವರಲ್ಲಿ ಅನೇಕರು ಇಂಗ್ಲಿಷರ ಕೋಠಿಗಳಲ್ಲಿ ತಯಾರಾದವರು. ಇವರಿಗೆ ಇಂಗ್ಲಿಷ್ ಮತ್ತು ಫ್ರೆಂಚ್ ಭಾಷೆಗಳು ಚೆನ್ನಾಗಿ ಬರುತ್ತಿದ್ದುವು. ಒಂದೆರಡು ಬಾರಿ ಇಂಗ್ಲಿಷರು ಬೊಂಬಾಯಿಯಿಂದ ಮದ್ದು ಗುಂಡುಗಳನ್ನು ಸಾಗಿಸಬೇಕಾಗಿತ್ತು. ಹೇರಳವಾದ ಹಣವನ್ನು ಕೊಟ್ಟು ಈ ಅಲ್ಲೀಸೇಟರ ದೋಣಿಗಳನ್ನು ಗೊತ್ತು ಮಾಡಿದರು. ಅವರ ಸಾಮಾನುಗಳು ನಿಶ್ಚಿತ ಕಾಲಕ್ಕೆ ಸರಿಯಾಗಿ ಬಂದು ತಲುಪಿದುವು. ಒಂದೆರಡು ಬಾರಿ ಇಂಗ್ಲಿಷ್ ರಾಯಭಾರಿಗಳು ಮಾಹೀಗೆ ಮತ್ತು ಗೋವಾಕ್ಕೆ ಪ್ರಯಾಣ ಮಾಡಬೇಕಾಯಿತು. ಅಲ್ಲೀಸೇಟರ ದೋಣಿಗಳನ್ನೇ ಗೊತ್ತು ಮಾಡಿಕೊಂಡರು. ಸೇಟರ ಕಡೆ ಜನರ ನಡವಳಿಕೆಗಳಿಂದ ಆ ಸರದಾರರು ಬಹಳ ತೃಪ್ತರಾದರು. ಕೆಲವು ಸಂದರ್ಭಗಳಲ್ಲಿ ಇಂಗ್ಲಿಷ್ ಅಧಿಕಾರಿಗಳು ತಮ್ಮ ಸರ್ಕಾರೀ ಹಣವನ್ನು ಸೇಟರ ಕೋಠಿಗಳ ಮೂಲಕ ರವಾನಿಸುತ್ತಿದ್ದರು. ಈ ಎಲ್ಲ ಕಾರಣಗಳಿಂದ ಅಲ್ಲೀಸೇಟರ ಕೋಠಿಗಳು ಮಂಗಳೂರು, ಗೋವಾ, ಬೊಂಬಾಯಿಗಳಲ್ಲಿಯೂ ತೆರೆಯಲ್ಪಟ್ಟುವು.

ಒಂದು ದಿನ ತಲಚೇರಿಯಲ್ಲಿದ್ದ ಇಂಗ್ಲಿಷ್ ಅಧಿಕಾರಿಯು ಅಲ್ಲೀಸೇಟರನ್ನು ನೋಡಬೇಕೆಂದು ಹೇಳಿ ಕಳುಹಿಸಿದನು. ಅಲ್ಲೀಸೇಟರು ಹೋಗಿ ಅಧಿಕಾರಿಯನ್ನು ಭೇಟಿ ಮಾಡಿದರು. ಆ ಅಧಿಕಾರಿಯು ಬಹಳ ಉಪಚಾರ ಮಾಡಿ ಗೌರವಿಸಿದನು.

ಸೇಟ್ ಸಾಹೇಬರೇ! ನಿಮ್ಮ ವ್ಯಾಪಾರವು ಚೆನ್ನಾಗಿದೆಯೋ?

ಚೆನ್ನಾಗಿದೆ!

ದೇಶದಲ್ಲಿ ಈಗ ಯುದ್ಧ ವಿಗ್ರಹಗಳ ಕಾಲ! ನಿಮ್ಮ ವ್ಯಾಪಾರವು ಸುಸೂತ್ರವಾಗಿ ನಡೆಯುತ್ತದೆಯೋ!

ಅದೇಕೆ? ಸುಲ್ತಾನರೂ ಕುಂಪನಿಯವರೂ ಸ್ನೇಹದಿಂದ ನಡೆದು ಕೊಂಡರೆ ಈ ದೇಶಕ್ಕೆ ಸುಭಿಕ್ಷವಲ್ಲವೆ?

ಹೌದು! ಲಾರ್ಡ್! ಹಾಗೆ ಆಗುವ ಸಂಭವವಿಲ್ಲ. ಸುಲ್ತಾನರದು ದಕ್ಷಿಣದಲ್ಲಿ ಬಹು ವಿಸ್ತಾರವಾದ ರಾಜ್ಯ. ಅವರಿಗೆ ಅಂತಃ ಇಂಗ್ಲಿಷರನ್ನು ಕಂಡರಾಗದು. ನೀವು ಅವರಂತಹ ಪ್ರಭಾವಶಾಲಿಗಳಾದ ನವಾಬರನ್ನು ಇರಗೊಟ್ಟರೆ ದಕ್ಷಿಣದಲ್ಲಿ ನಿಮ್ಮ ರಾಜ್ಯವನ್ನು ಸ್ಥಾಪಿಸುವುದು ಸಾಧ್ಯವೇ ಇಲ್ಲ. ಅಷ್ಟೇ ಅಲ್ಲ. ಹಿಂದೂ ಜನರಿಗೆ ಸುಲ್ತಾನರನ್ನು ಕಂಡರಾಗದು!

ಸರಿ ಹಾಗಾದರೆ! ಒಂದು ವೇಳೆ ಕಂಪನಿಯವರಿಗೂ ಸುಲ್ತಾನರಿಗೂ ಯುದ್ಧ ವಾದರೆ ಯಾರಿಗೆ ಜಯವಾಗುವುದು?

ಅದನ್ನು ನಿರ್ಣಯಿಸುವುದು ಕಷ್ಟ! ಸುಲ್ತಾನರು ಸಾಮಾನ್ಯರಲ್ಲ. ಯುದ್ಧದಲ್ಲಿ ಮಹಾ ಪರಾಕ್ರಮಶಾಲಿಗಳು. ಅವರಲ್ಲಿಯೂ ಬಹಳ ಬಲವಾದ ಸೈನ್ಯವಿದೆ.

ನಿಮಗೂ ಅವರಿಗೂ ಯಾವ ಸಂಬಂಧವೂ ಇಲ್ಲವೋ!

ಇದುವರೆಗೆ ಇಲ್ಲ! ಆದರೆ ಅವರು ಈಗಲೇ ನನ್ನನ್ನು ವಿಚಾರಿಸಿ ತಿಳಿದು ಕೊಂಡಿದ್ದಾರೆ. ನನ್ನಿಂದ ಸ್ವಲ್ಪ ಸಾಲವನ್ನು ತೆಗೆಯಬೇಕೆಂದು ಒಂದೆರಡು ಬಾರಿ ಸಂಧಾನ ಮಾಡಿದ್ದಾರೆ.

ಕೊಡಲು ಒಪ್ಪಿದ್ದೀರೇನು?

ಕೊಡುತ್ತಿದ್ದೆ. ಅವರು ಸಾಲವನ್ನು ತೀರಿಸುವ ಭರವಸೆ ನನಗಿಲ್ಲ. ಒಂದು ಪಕ್ಷ ನಮ್ಮ ಸಾಲವನ್ನು ತೀರಿಸಬೇಕಾದರೂ ದೇಶವನ್ನು ಕೊಳ್ಳೇ ಹೊಡೆದು ನಮ್ಮ ಸಾಲವನ್ನು ತೀರಿಸಬೇಕು. ಆ ಹಣವನ್ನು ತೆಗೆದುಕೊಂಡರೆ ಜನರ ದ್ವೇಷಕ್ಕೆ ನಾವು ಪಾತ್ರರಾಗುತ್ತೇವೆ.

ಹಾಗಾದರೆ ನೀವು ಅವರಿಗೆ ಸಾಲ ಕೊಡುವುದಿಲ್ಲ.

ಕೊಡುತ್ತೇನೆ. ಜವಾಹಿರಗಳನ್ನು ತಂದಿಟ್ಟರೆ ಹೆಚ್ಚು ಬೆಲೆಯನ್ನು ಕೊಡುವುದಾಗಿ ಹೇಳಿದ್ದೇನೆ.

ಈ ಅಧಿಕಾರಿಯು ಇವನನ್ನು ಬಹಳ ಮನ್ನಣೆಮಾಡಿ ಕಳುಹಿಸಿದನು. ಅಲ್ಲೀಸೇಟನು ಬಹು ಬುದ್ಧಿವಂತ! ಒಳ್ಳೇ ವ್ಯಾಪಾರದ ಗುಣಗಳಿವೆ. ನಾನು ನಾನು ಈ ಹಿಂದೂಸ್ಥಾನದಲ್ಲಿ ಇಷ್ಟು ಬುದ್ಧಿವಂತನನ್ನು ಕಂಡಿಲ್ಲ. ಈ ಯುದ್ಧ ಸಮಯದಲ್ಲಿ ಇಷ್ಟು ಧೈರ್ಯದಿಂದ ವ್ಯಾಪಾರ ಮಾಡುವ ಧೀರನನ್ನು ನೋಡಿಲ್ಲ. ಶಾಬಾಸ್! ಎಂದುಕೊಂಡನು.

ಸರ್ವಥಾಇಲ್ಲ! ಈ ಭಕ್ಷಿಯು ಯಾರೋಒಬ್ಬ ಬಿಸಿರಕ್ತದಯುವಕನಿರಬೇಕು. ಸಾಹಸಿಯೇ ಇರಬಹುದು. ಪಾಪ! ಆದರೇನು ಜನಾಲುದ್ದೀನರ ಕೈಗೆ ಶಿಕ್ಕಿ ಅನ್ಯಾಯವಾಗಿ ಸಾಯುವನು.

ದೌಲತ್ ಮತ್ತು ರಾಧಾರಾಣಿಯವರು ಮಂಗಳೂರಿಗೆ ಹೊರಡುವು ದೆಂದೂ ಅಲ್ಲಿ ಇಯಜ್‌ಖಾನರ ದರ್ಶನವಾಗುವುದೆಂದೂ ನಿಶ್ಚಯಿಸಿದರು.

ಆ ಫಕೀರನನ್ನು ಕರೆಕಳುಹಿಸಿ ಫಕೀರರೆ! ನಿಮಗೆ ಈ ಹುಸೇಖಾನರಿ ರುವ ಸ್ಥಳವು ಗೊತ್ತಿದೆಯೋ?

ರಾಣಿಯವರೇ ! ಚೆನ್ನಾಗಿ ಬಲ್ಲೆ !

ತಾವು ನಮ್ಮ ಜೊತೆಯಲ್ಲಿಯೇ ಬರುತ್ತೀರಾ ? ನಮಗೆ ಹುಸೇಖಾನ ರಿರುವ ತಾವನ್ನು ತೋರುತ್ತೀರಾ ?

ನಾನು ತಮ್ಮ ಜೊತೆಯಲ್ಲಿ ಬರಲು ಒಪ್ಪುವುದಿಲ್ಲ. ತಾವು ರಾಜಕೀಯ ಮಹಾ ವ್ಯಕ್ತಿಗಳು. ತಮ್ಮ ಜೊತೆಯಲ್ಲಿ ನನ್ನಂತಹವರಿದ್ದರೆ ಅಪಾಯವಿದೆ. ತಾವು ಮಂಗಳೂರಿನ ಅರಮನೆಯಲ್ಲಿ ಬಂದಿಳಿವರೆ ಹುಸೇಖಾನರು ಅಲ್ಲಿಗೆ ಬಂದು ಸನ್ನಿಧಾನದ ಭೇಟಿ ಮಾಡುವಂತೆ ಏರ್ಪಾಡು ಮಾಡುತ್ತೇನೆ.

ಫಕೀರರೇ ! ನಮ್ಮ ಜೊತೆಯಲ್ಲಿದ್ದರೆ ನಿಮಗೇನು ಅಪಾಯ ?

ರಾಣಿಯವರೇ ! ದಕ್ಷಿಣ ಕನ್ನಡದಲ್ಲಿ ವಿಪ್ಲವವು ಬಹಳ ಉಗ್ರರೂಪ ವನ್ನು ತಾಳಿದೆ. ಸುಲ್ತಾನರ ಕಡೆಯವರು ಯಾರೇ ಆಗಲಿ ! ಅವರು ಫಕೀರ ರಾಗಲೀ ಗೋಸಾಯಿಗಳಾಗಲೀ ಅವರ ತಲೆಯನ್ನು ವಿದ್ರೋಹಿಗಳು ಹಾರಿಸಿಬಿಡುತ್ತಾರೆ!

ದೌಲತ್– ಅಬ್ಬಾ ! ವಿದ್ರೋಹಿಗಳು ಅಷ್ಟು ಗಟ್ಟಿಗರೇ !

ಹೌದು ! ತಾಯಿ ! ಸಂದೇಹವೇನು ? ಈ ಬಾರಿ ನಗರದ ದಿವಾನರು ಹೋಗಲೀ, ಸ್ವಯಂ ಸುಲ್ತಾನರೇ ಬರಲಿ ! ಈ ವಿದ್ರೋಹವನ್ನು ಅಣಗಿಸ ಲಾಗುವುದಿಲ್ಲ. ಕ್ರಾಂತಿಗೇ ಜಯ.

ದೌಲತ್ತಳು ನಕ್ಕಳು. ಫಕೀರರೇ ನಮಗೇಕೆ ಈ ವಿದ್ರೋಹದ ಚಿಂತೆ. ಆದರೂ ಆ ಭಕ್ಷಿಯನ್ನು ಒಂದು ಬಾರಿ ನೋಡಬೇಕೆನ್ನಿಸುತ್ತದೆ.

ಹೌದು ! ರಾಣಿಯವರೇ ! ಅಂತಹ ಮಹಾಪುರುಷನೇ ಅವನು.

ಫಕೀರರೇ, ನೀವು ಆ ಭಕ್ಷಿಯನ್ನು ನೋಡಿದ್ದೀರೇನು ?

ನೋಡಿದೇನೆ.

ನೀವು ಚಿಕ್ಕವಯಸ್ಸಿನವರಂತೆ ಕಾಣುತ್ತೀರಿ. ನೀವೇಕೆ ಫಕೀರರಾದಿರಿ.

ರಾಣಿಯವರೇ! ನಾನು ನಿಜವಾದ ಫಕೀರನಲ್ಲ! ವೇಷಧಾರಿ!

ಈ ವೇಷವೇಕೆ ನಿಮಗೆ!

ಈ ವಿಪ್ಲವ ಕಾಲದಲ್ಲಿ ಈ ವೇಷವಿದ್ದರೆ ಉಭಯ ಪಕ್ಷಗಳಿಂದಲೂ ರಕ್ಷಣೆ ಇದೆ.

ಹಾಗಾದರೆ ನಿಮ್ಮ ನಿಜವಾದ ಪರಿಚಯವನ್ನು ಕೊಡುವಿರಾ?

ನನ್ನ ಪರಿಚಯವೇ? ಅದರಿಂದ ನಿಮಗೇನು ಲಾಭ! ರಾಣಿಯವರೇ ನಾನೊಬ್ಬ ವಿದ್ರೋಹಿ!

ದೌಲತ್ತಳೂ ರಾಧೆಯೂ ಚಕಿತರಾದರು!

ರಾಣಿಯವರೇ! ನನಗೆ ಅಪ್ಪಣೆಯನ್ನು ಕೊಡಿರಿ! ನಾನು ಹೊರಡುತ್ತೇನೆ.

ಎಲ್ಲಿಗೆ ಹೋಗುತ್ತೀರಿ!

ಮಂಗಳೂರಿಗೆ ಹಿಂದಿರುಗುತ್ತೇನೆ.

ರಾಧೆಯು ನಗುತ್ತಾ ಫಕೀರರೇ! ಬಹಳ ಬಣಿದು ಬಂದಿದ್ದೀರಿ ಈ ರಾತ್ರಿ ಇಲ್ಲಿ ವಿಶ್ರಮಿಸಿಕೊಳ್ಳಿರಿ. ನಾಳೆ ಪ್ರಯಾಣ ಮಾಡಬಹುದು.

ರಾಣಿಯವರೇ! ನಾನು ವಿದ್ರೋಹಿ! ಇಲ್ಲಿ ಹೇಗಿರಲಿ!

ನೀವು ನಮ್ಮ ವಿದ್ರೋಹಿಗಳಲ್ಲ! ನಮ್ಮ ಕಾರ್ಯಾರ್ಥವಾಗಿ ಇಲ್ಲಿಗೆ ಬಂದಿದ್ದೀರಿ. ನಿಮ್ಮನ್ನು ಉಪಚರಿಸುವುದು ನಿಮಗೆ ರಕ್ಷಣೆ ಕೊಡುವುದು ನಮ್ಮ ಕರ್ತವ್ಯ!

ದೌ- ಫಕೀರರೇ! ತಮ್ಮಲ್ಲಿ ಮತ್ತೊಂದು ಮಾತು ಕೇಳಬೇಕಾಗಿದೆ ತಮಗೂ ಈ ಹುಸೇಖಾನರಿಗೂ ಹೇಗೆ ಸ್ನೇಹ!

ನನಗೂ ಅವರಿಗೂ ಸ್ನೇಹವಿಲ್ಲ! ನಮ್ಮ ಭಕ್ಷಿಯವರಿಗೂ ಹುಸೇಖಾನರಿಗೂ ಬಹಳ ಬಹಳ ಸ್ನೇಹ! ಏಕದೇಹ ನ್ಯಾಯ!

ಇಬ್ಬರು ರಾಣಿಯವರ ಮುಖವೂ ವಿವರ್ಣವಾಯಿತು!

ಫಕೀರ- ದೌಲತ್ ರಾಣಿಯವರ ಕಡೆ ತಿರುಗಿ ರಾಣಿಯವರೇ ನನ್ನಲ್ಲಿ ತಮಗೆ ಸಂದೇಹವಾಗಿದೆಯೇನು? ಇವರಲ್ಲೇನೋ ವಿದ್ರೋಹಿಗಳ ಪಿತೂರಿ ಇದೆಯೆಂದು ಭಯಪಡುವಿರೇನು?

ಕಥೆಗಳನ್ನು ಹೇಳಿದಳು. ವಿಪ್ಲವವು ಗೆಲ್ಲುತ್ತದೆಂದೂ ಭಕ್ಷಿಯು ರಾಜನಾಗುತ್ತಾನೆಂದೂ ಉತ್ಸಾಹದಿಂದ ಹೇಳಿದಳು. ಮಾಧವಿಯು ನಿಟ್ಟುಸಿರು ಬಿಟ್ಟು ಯಾರು ರಾಜರಾದರೇನು ಅಜ್ಜಿ ! ನಾನು ಉಳಿದುಕೊಂಡರೆ ಸಾಕು! ನನಗೂ ಪ್ರಾಣ ಹೋಗುತ್ತದೆಂಬ ಭಯವಿಲ್ಲ. ಮಾನ ಕೆಡಿಸುತ್ತಾರೆ. ಜಾತಿ ಕೆಡಿಸುತ್ತಾರೆ-ಎಂದು ಭಯ ಎಂದಳು.

ಆ ಮುದುಕಿಯು ನೀನು ಬೆಳಿಗ್ಗೆಯಿಂದ ಊಟ ಮಾಡಿಲ್ಲ. ಸ್ವಲ್ಪ ಊಟ ಮಾಡಮ್ಮಾ ಎಂದು ಉಪಚರಿಸಿ ಊಟಮಾಡಿಸಿದಳು. ಮಾಧವಿಯು ಭಯಪಟ್ಟವಳಂತೆ ಒಂದು ಮೂಲೆಯಲ್ಲಿ ಮುದುರಿಕೊಂಡು ಮಲಗಿದಳು. ಅರ್ಧರಾತ್ರಿಯ ಸಮಯದಲ್ಲಿ ಭಕ್ಷಿಯು ಬಂದನು ಅವನು ಹಜಾರದಲ್ಲಿ ಕುಳಿತುಕೊಂಡನು.

ಅಜ್ಜಿ, ಫಕೀರರು ಒಬ್ಬ ಹಿಂದೂ ಹುಡುಗಿಯನ್ನು ನಿನ್ನ ವಶಕ್ಕೆ ಒಪ್ಪಿಸಿದಾರೇನು ?

ಹೌದು, ಎಂದುಹೇಳಿ, ಈ ಮೂಲೆಯಲ್ಲಿ ಮಲಗಿದ್ದ ಮಾಧವಿಯನ್ನು ಎಬ್ಬಿಸಿ ಕರೆತಂದು ಭಕ್ಷಿಯ ಮುಂದೆ ನಿಲ್ಲಿಸಿದಳು.

ಭಕ್ಷಿ-ನೀನಾರಮ್ಮ, ನೀನೇಕೆ ಇಲ್ಲಿಗೆ ಬಂದೆ?

ನಾನೊಬ್ಬ ನಿರ್ಭಾಗ್ಯಳು ಬಹಳ ಅಪಗಡದಲ್ಲಿದ್ದೇನೆ. ನಾನು ರಕ್ಷಣೆಗಾಗಿ ಆ ಫಕೀರನ ಹತ್ತಿರ ಬಂದೆ. ಅವರು ತಂದು ನನ್ನನ್ನು ಇಲ್ಲಿಬಿಟ್ಟರು. ಇದು ವಿದ್ರೋಹಿಗಳ ನೆಲೆಯೆಂದು ಕಾಣುತ್ತದೆ ನಾನೊಂದು ಕ್ಷಣ ಇಲ್ಲಿರುವುದಿಲ್ಲ. ಈ ವಿದ್ರೋಹಿಗಳನ್ನೆಲ್ಲಾ ಒಂದೆರಡು ದಿನಗಳಲ್ಲಿ ಸರ್ಕಾರದವರು ಮಟ್ಟ ಹಾಕಿಬಿಡುತ್ತಾರೆ. ಅಜ್ಜಿಯ ಕಡೆ ತಿರುಗಿ ಅಜ್ಜಿ ನಾನಿಲ್ಲಿರುವುದಿಲ್ಲ. ಅಪ್ಪಣೆ ಕೊಡಿ ನಾನು ಹೋಗುತ್ತೇನೆ.

ಭಕ್ಷಿ- ಎಲ್ಲಿಗೆ ಹೋಗುತ್ತೀಯಮ್ಮ ಈ ಅರ್ಧರಾತ್ರಿಯಲ್ಲಿ?

ಎಲ್ಲಿಗಾದರೂ ಹೋಗುತ್ತೇನೆ.

ಭಕ್ಷಿ- ಬೇಡ ತಾಯಿ, ಹೆದರಬೇಡ, ನಾನು ನಿನ್ನನ್ನು ರಕ್ಷಣೆ ಮಾಡುತ್ತೇನೆ.

ಮಾಧವಿ- ನೀನಾರು ? ನೀನು ಒಬ್ಬ ವಿದ್ರೋಹಿಯಲ್ಲವೇ ?

ಭಕ್ಷಿ- ಹೌದು ನಾನೊಬ್ಬ ವಿದ್ರೋಹಿ.

ಮಾಧವಿ- ನಾನು ನಿನ್ನ ಜೊತೆಯಲ್ಲಿ ಖಂಡಿತವಾಗಿ ಇರುವುದಿಲ್ಲ. ನೀನು ನನಗೊಂದು ಉಪಕಾರಮಾಡುತ್ತೀಯಾ ? ಏನೂ ಇಲ್ಲ. ಇದನ್ನು

ಮಾಧವಿಯು ಸಣ್ಣ ನಗುವನ್ನು ನಕ್ಕಳು. ಅಲ್ಲಿಂದ ಹೊರಡಲು ಆತುರವನ್ನು ತೋರಿದಳು. ಬಾಗಿಲಿಗೆ ಹೊರಟೇ ಬಿಟ್ಟಳು.

ಭಕ್ಷಿಯು ದಡಕ್ಕನೆ ಎದ್ದು ಅವಳ ಕೈ ಹಿಡಿದುಕೊಂಡನು. ಮಾಧವಿ ! ಹೋಗಬೇಡ ! ನೀನು ಈ ರಾತ್ರಿ ಇಲ್ಲಿಂದ ಹೊರಟರೆ ಅಪಾಯವು ಹೆಚ್ಚು ! ನಾನು ನಿನಗೆ ರಕ್ಷಣೆ ಕೊಡುತ್ತೇನೆ. ಧೈರ್ಯದಿಂದಿರು. ನನ್ನ ಪ್ರಾಣ ಹೋದರೂ, ನಿನ್ನನ್ನು ಕಾಪಾಡುತ್ತೇನೆ.

ನೀನಾರು ಹೇಳು ! (ಗಾಬರಿಯಿಂದ)

ನಾನು ವಿದ್ರೋಹಿಗಳ ಮುಖಂಡ ಭಕ್ಷಿ !

ಬೇಡ ! ಬೇಡ ! ನನ್ನ ಕೈಬಿಡು. ನಾನು ಕೂಗಿಕೊಳ್ಳುತ್ತೇನೆ. ಇಲ್ಲದಿದ್ದರೆ ಈಕ್ಷಣ ವಿಷ ತಿಂದುಬಿಡುತ್ತೇನೆ.

ಏಕೆ ? ತಾಯಿ, ನನ್ನನ್ನು ಕಂಡರೆ ಅಷ್ಟು ಭಯವೆ ? ಎಂದು ಕೈ ಬಿಟ್ಟನು.

ನಿನ್ನನ್ನು ಕಂಡರೆ ನನಗೇಕೆ ಭಯ ! ನೀನು ಮಹಾ ಪುರುಷ! ನಿನ್ನ ಗುರುವಾದ ಫಕೀರನು ನನ್ನನ್ನು ಕರತಂದು ಇಲ್ಲಿ ಬಿಟ್ಟಿದಾನೆ. ನೀನು ನನಗೆ ಕೊಂಚವೂ ಕೆಡುಕನ್ನು ಮಾಡುವುದಿಲ್ಲ. ಆದರೆ, ಕುತುಬುದ್ದಿನನು ಇಂದೇ ನಿನ್ನನ್ನು ಹಿಡಿಯುತ್ತಾನೆ. ಅವನ ಸರ್ವಸ್ವವನ್ನೂ ಸೂರೆಮಾಡಿ, ನಿನ್ನನ್ನು ಹಿಡಿಯುತ್ತಾನೆ. ಇಲ್ಲದಿದ್ದರೆ, ನಾಳೆ ದಿನ ಅವನ ಅಧಿಕಾರವು ಹೋಗಿ ಬಿಡುತ್ತದೆ.

ಭಕ್ಷಿ– ನಗುತ್ತಾ ನಿನಗೆ ಇದನ್ನೆಲ್ಲಾ ಯಾರು ಹೇಳಿದರು. ಹುಚ್ಚುಕಥೆ !

ಮಾಧವಿ ! ಗೋವಿಂದನು ಎಲ್ಲವನ್ನೂ ಹೇಳಿದನು.

ಭಕ್ಷಿ– ಗೋವಿಂದನಿಗೆ ಅದು ಗೊತ್ತಿಲ್ಲ!.ನಾನು ಹೇಳುತ್ತೇನೆ. ನನ್ನನ್ನು ಯಾರೂ ಹಿಡಿಯಲಾರರು.

ಮಾಧವಿ– ಹೇಗೇ ಆಗಲಿ ! ನಾನು ನಿನ್ನ ಜೊತೆಯಲ್ಲಿರುವುದಿಲ್ಲ. ಈ ಸ್ಥಳದಲ್ಲಿರುವುದಿಲ್ಲ!

ಮಾಧವಿ– ನನ್ನೊಡನೆ ಬಾ! ಇನ್ನೂ ಸುರಕ್ಷಿತವಾದ ಸ್ಥಳದಲ್ಲಿಡುತ್ತೇನೆ.

ಮಾಧವಿಯು ಒಪ್ಪಿದಳು.

ಭಕ್ಷಿಯು ಅವಳನ್ನು ಜೊತೆಯಲ್ಲಿ ಕರದುಕೊಂಡು ಆ ನಿಶಿರಾತ್ರಿಯಲ್ಲಿ ಎರಡು ಮೈಲಿ ನಡದುಹೋದನು. ಹೊರಡುವಾಗ ಮಾಧವಿ ! ಈ ಬ್ಯಾಕನ್ನು

ಯೆಂದು ಕಾಣುತ್ತದೆ. ಆಮೇಲೆ ಬರಗಾಲವು ಬಂತು. ಅಲ್ಲಲ್ಲಿ ಕಳ್ಳತನ ದರೋಡೆಗಳಿಗೆ ಆರಂಭವಾಯಿತು. ಅನೇಕರನ್ನು ಹಿಡಿದು, ಶಿಕ್ಷೆ ಮಾಡಿಸಿದೆವು. ಅದೆಲ್ಲಾ ಶಮನವಾಗಿಹೋಯಿತು! ಇದೇ ಸಮಯವೆಂದು ವಿದ್ರೋಹಿಗಳು ತಲೆ ಎತ್ತಿದರು. ಇದಕ್ಕೆಲ್ಲಾ ಕಾರ್ಕಳದ ಫಕೀರರೂ, ಭಕ್ಷಿ ಎಂಬುವನೊಬ್ಬ ತರುಣನೂ ಮುಖ್ಯಸ್ಥರು. ಅವರಿಬ್ಬರನ್ನೂ ಹಿಡಿದು ದಂಡಿಸಬೇಕೆಂದು ನಿಶ್ಚಯಿಸಿದೆ. ಆದರೆ ಸುಲ್ತಾನರ ರಾಜ್ಯದಲ್ಲಿ ಪ್ರಭಾವಶಾಲಿಯಾದ ಫಕೀರನನ್ನು ಹಿಡಿದು ಶಿಕ್ಷಿಸುವುದು ಅಪರಾಧವಾಗುವುದೆಂದು ತಡೆದಿದೇನೆ. ಆ ಫಕೀರನು ವಿಚಿತ್ರ ಪುರುಷ! ಈಗಲೂ ವಿದ್ರೋಹದ ಮಾತುಗಳನ್ನಾಡುತ್ತಾನೆ. ತಲೆ ಮರೆಸಿಕೊಂಡಿಲ್ಲ. ರಾಜಾರೋಷಾಗಿ ಓಡಾಡುತ್ತಾನೆ. ಎಲ್ಲ ಅಧಿಕಾರಿಗಳನ್ನೂ ನೋಡುತ್ತಾನೆ. ನನ್ನಲ್ಲಿಯೂ ಒಂದಾವೃತ್ತಿ ಬಂದಿದ್ದನು. ಭಕ್ಷಿಯು ಈಚೆಗೆ ಕೆಲವು ದಿವಸಗಳಿಂದ ತಲೆತಪ್ಪಿಸಿಕೊಂಡಿದಾನೆ. ಇವನೇ ತರುಣರನ್ನೆಲ್ಲಾ ಎತ್ತಿಕಟ್ಟಿರುವ ಮುಂದಾಳೆಂದು ಎಲ್ಲರೂ ಹೇಳುತ್ತಾರೆ.

ಇತ್ತೀಚೆಗೆ ಕೆಲವು ರಾಜಭಂಡಾರದ ಲೂಟಿಗಳಾಗಿವೆ. ಈ ವಿದ್ರೋಹಿಗಳಿಗೆ ನಮ್ಮ ಭಂಡಾರವನ್ನು ಲೂಟಿ ಮಾಡುವಷ್ಟು ಧೈರ್ಯವಾಗಲೀ, ಬಲವಾಗಲೀ ಇಲ್ಲ. ಇದೆಲ್ಲಾ ಪಿಂಡಾರಿಯವರು ಮಾಡಿದ್ದೆಂದು ಅನೇಕರು ಸ್ಥಳದಂದಿಗರು ಹೇಳುತ್ತಾರೆ. ಅವರಿಂದ ಹೆಚ್ಚೇನೂ ನಷ್ಟವಾಗಿಲ್ಲ. ಇತ್ತೀಚೆಗೆ ಕೆಲವರು ಮುಖ್ಯಾಧಿಕಾರಿಗಳ ಕೊಲೆಗಳೂ ಆಗಿವೆ. ಅನೇಕರನ್ನು ಹಿಡಿದಿದೇವೆ ಇನ್ನೂ ಶಿಕ್ಷೆ ಮಾಡಿಲ್ಲ.

ಫೌಜುದಾರರೇ! ತಾವು ಹೇಳುವುದೆಲ್ಲಾ ಬಹುಮಟ್ಟಿಗೆ ಸರಿಯಾಗಿಯೇ ಇದೆ. ಈ ಎಲ್ಲ ವಿದ್ಯಮಾನಗಳಿಂದ ರಾಜ್ಯದ ಬಿಗಿತಪ್ಪಿಹೋಗಿದೆಯಲ್ಲವೇ?

ಹೌದು! ರಾಜ್ಯ ಸೂತ್ರಗಳು ಶಿಥಿಲವಾಗಿಹೋಗಿವೆ.

ಆದ್ದರಿಂದಲೇ ಸುಲ್ತಾನರವರು ನನ್ನನ್ನು ಇಲ್ಲಿಗೆ ಕಳಿಸಿದಾರೆ.

ನಾನು ಯಾವಾಗಲೂ ಶಿರಸಾವಹಿಸಿ ಆಜ್ಞೆಗೆ ಸಿದ್ಧನಾಗಿದೇನೆ.

ನೀವು ಈ ವಿಪ್ಲವಕಾರರನ್ನೆಲ್ಲಾ ಮೊದಲೇ ಬಂದೋಬಸ್ತು ಮಾಡಲಿಲ್ಲವೇಕೆ?

ಅವರು ಸುಮಾರು ಹತ್ತು ಸಹಸ್ರಜನರಿದಾರೆ. ಅವರನ್ನೆಲ್ಲಾ ಹಿಡಿದು ಬಹಿರಂಗವಾಗಿ ಶಿಕ್ಷಿಸುವುದು ರಾಜನೀತಿಯಲ್ಲವೆಂದೂ ಈ ಗರೀಬನ

ಇ-ಖಾ- ದೌಲತ್ ರಾಣಿಯವರ ಸಂತೋಷಕ್ಕಾಗಿ ಹಾಗೆ ಹೇಳಿದರೂ ಹೇಳ ಬಹುದು. ಆದರೆ ನಾನು ಪ್ರತ್ಯಕ್ಷನಾಗಿ ಸುಲ್ತಾನರ ಕರ್ಮಚಾರಿಯಲ್ಲ ಸುಲ್ತಾನೀ ರಾಜ್ಯದ ಹಿತಚಿಂತಕ !

ದೌ- ಖಾನರವರೇ ತಾವು ಮೊದಲಿದ್ದಂತೆ ಸಾಚಾವಾಗಿಲ್ಲ. ಇಂದ್ರ° ಜಾಲಕ ರಂತೆ ಮಾತನಾಡುತ್ತೀರಿ ! ನೀವು ಸುಲ್ತಾನೀ ರಾಜ್ಯದ ಮಿತ್ರರಂತೆ ! ಇಂಗ್ಲಿಷ್ ಬಾವುಟದ ಆಶ್ರಯ !! ಇದೆಲ್ಲಾ ಖಾನರವರಿಗೆ ಹೇಗೆ ಸರಿ ಹೋಗುತ್ತದೋ ?

ಖಾ- ರಾಣಿಯವರಿಬ್ಬರನ್ನೂ ಜೊತೆಯಲ್ಲಿ ಕರದುಕೊಂಡು ಹೋಗಿ ನನ್ನ ಕಾರ್ಯ ಪರಿಚಯವನ್ನೆಲ್ಲಾ ಮಾಡಿಸುತ್ತೇನೆ.

ದೌ- ಯಾವಾಗ ?

ಇ-ಖಾ- ಈಗಲೇ ! ತಮ್ಮ ಆಜ್ಞೆಯಾದರೆ ಈ ಹಡಗು ಹೀಗೆಯೇ ಹೊರ ಡುತ್ತದೆ. ಸಿದ್ಧವಾಗಿದೆ.

ದೌ- ನಗುತ್ತಾ ನಾನು ಸಿದ್ಧ !

ರಾ- ಖಾನರವರೇ ! ದೌಲತ್ ರಾಣಿಯವರನ್ನು ಕರದುಕೊಂಡು ಹೋಗ ಬಹುದು. ತಾವು ನಮ್ಮ ರಾಣಿಯವರನ್ನು ಅಪಹರಿಸಿಗೊಂಡು ಹೋಗುವುದಕ್ಕಾಗಿಯೇ ಬಂದಿರುವಂತಿದೆ.

ನಾನು ನಿಮ್ಮೊಡನೆ ಬರುವುದಿಲ್ಲ.

ಇ-ಖಾ- ದೌಲತ್ ರಾಣಿಯವರು ಏಕಾಕಿಯಾಗಿ ನನ್ನೊಡನೆ ಬರುವುದಾ ದರೆ ಅಂದೇ ಬರುತ್ತಿದ್ದರು ಅವರು ನಿಮಗಾಗಿಯೇ ನಗರದಲ್ಲಿದ್ದಾರೆ. ಈಗ ನಿಮ್ಮನ್ನು ಬಿಟ್ಟು ಅವರೊಬ್ಬರೇ ಬರುವರೇ !

ರಾ- ನವಾಬರೇ ! ಈ ಮಂಗಳೂರಿನ ವಿಪ್ಲವವು ಪ್ರಾಪ್ತವಾಗಿರುವಾಗ ನಾನು ಈ ಸ್ಥಳವನ್ನು ಬಿಟ್ಟು ಎಲ್ಲಿಯೂ ಹೋಗುವುದಿಲ್ಲ.

ಇ-ಖಾ- ನಾನು ಇಂದು ಹೊರಟು ಹೋಗುತ್ತೇನೆ.

ದೌ- ನೀವು ಹೊರಡಿರಿ ! ನಾವು ಹೇಗಾದರೂ ನಿಮ್ಮನ್ನು ಹುಡುಕಿಕೊಂಡು ಬರುತ್ತೇವೆ.

ರಾ- ತಾವು ಇಲ್ಲಿ ಇದ್ದರೆ ಎಷ್ಟೋ ಉಪಕಾರವಾಗುವುದು.

ಇ-ಖಾ- ಕ್ಷಮಿಸಿರಿ ! ರಾಣಿಯವರೇ ! ನಾನು ಇಲ್ಲಿಗೆ ಬಂದಿರುವುದು ಯಾರಿಗೂ ಗೊತ್ತಿಲ್ಲ. ಈ ಸಮಯದಲ್ಲಿ ಯಾರಿಗೂ ತಿಳಿಯಲೂ

ಕಿಲ್ಲೇದಾರರು ಬಹಳ ಭೀತಿಯಿಂದ ಎಲ್ಲ ಸಮಾಚಾರಗಳನ್ನು ಹೇಳಿದರು.

ಕಿಲ್ಲೇದಾರ್ ರಹಮಾನ್ ಸಾಹೇಬರವರೇ! ಫೌಜುದಾರರು ಖೂನಿ ಯಾದದ್ದು ನಿಜವೆ?

ಹೌದು! ಹುಜೂರು ಖೂನಿಯಾಗಿವೆ.

ನಮ್ಮ ಸರ್ಕಾರಕ್ಕೆ ಬಹಳ ಅಗೌರವವಾದಂತಾಯಿತು! ನಮಗೆ ವಿದ್ರೋಹಿಗಳು ನಮ್ಮ ಎದುರಿನಲ್ಲಿಯೇಬಂದು "ಸಜಾ" ಕೊಟ್ಟಂತಾಯಿತು.

ಹೌದು! ಸರ್ಕಾರ್!

ಆ ಭಕ್ಷಿಯೇ ಖೂನಿ ಮಾಡಿರಬೇಕು.

ಅವನು ಓಡಿಹೋಗಿದ್ದಾನೆ ಅಲ್ಲವೆ?

ಓಡಿಹೋಗಿದ್ದಾನೆ

ಆ ಭಕ್ಷಿಯು ಬಹಳ ಗಟ್ಟಿಗನೆಂಬುದರಲ್ಲಿ ಅಡ್ಡಿಯೇ ಇಲ್ಲ. ಆದರೆ ಫೌಜುದಾರರ ಅರಮನೆಯಲ್ಲಿ ಯಾರೋ ಷರೀಕ್ ಆಗದೆ ಇದೆಲ್ಲಾ ನಡೆದಿಲ್ಲ.

ಹುಜೂರು! ಸನ್ನಿಧಾನದಲ್ಲಿ ಅರಿಕೆ ಮಾಡಲು ಭಯವಾಗುತ್ತದೆ.

ಹೇಳಿರಿ! ನೀವು ಏನೇನು ಕೇಳಿದ್ದೀರೋ ಅದನ್ನೆಲಾ ಸ್ಪಷ್ಟವಾಗಿ ತಿಳಿಸಿರಿ

ಖಾವಿಂದ್! ಒಂದು ಖೂನಿಯಲ್ಲ. ಫೌಜುದಾರರ ಮಹಲಿನಲ್ಲಿ ಎರಡು ಖೂನಿಗಳಾಗಿವೆ. ಒಂದು ಕೋಣೆಯಲ್ಲಿ. ಬಾಗಿಲಿನಲ್ಲಿಯೇ ಫೌಜುದಾರರು ಬಿದ್ದಿದಾರೆ. ಸ್ವಲ್ಪ ದೂರದಲ್ಲಿ ಮತ್ತೊಬ್ಬ ವಿದ್ರೋಹಿಯು ಖೂನಿ ಯಾಗಿದಾನೆ. ಇದಕ್ಕೆ ಫೌಜುದಾರರ ಬೇಗಂಸಾಹೇಬರೇ ಮದತ್ ಮಾಡಿ ದಾರೆಂದು ಹೇಳುತ್ತಾರೆ. ಬೇಗಂಸಾಹೇಬರು ಆ ವಿದ್ರೋಹಿಯ ಹೆಣದ ಹತ್ತಿರಲೇ ಕುಳಿತಿದಾರೆ.

ದಿವಾನ್- ಆ ಕೊಲೆಯಾಗಿರುವ ವಿದ್ರೋಹಿಯೇ ಭಕ್ಷಿ ಇರಬಹುದು. ಆ ಭಕ್ಷಿಯು ಏನೋ ಮೋಸದಿಂದ ಫೌಜುದಾರರನ್ನು ಕೊಲೆ ಮಾಡಿರ ಬಹುದು. ಆ ಭಕ್ಷಿಯನ್ನು ಬೇಗಂಸಾಹೇಬರು ಕೊಲೆ ಮಾಡಿರ ಬಹುದು.

ಕಿಲ್ಲೇದಾರನು ತಲೆಬಾಗಿಸಿದನು. ಬೇಗಂ ಸಾಹೇಬರನ್ನು ಮಾತನಾ ಡಿಸುವಂತಿಲ್ಲ! ಅವರು ಹುಚ್ಚರಂತಾಗಿದಾರೆ ಎಂದನು.

ಇಯಚ್- ದಿವಾನರವರೇ, ತಾವು ಇಲ್ಲಿಗೆ ದಯಮಾಡಿಸಿ ಒಂದು ತಿಂಗಳಾಗಿದೆ. ಇನ್ನೂ ವಿದ್ರೋಹದ ಕಾರಣವು ಗೊತ್ತಿಲ್ಲವೆಂದರೆ ಸೋಜಿಗದ ಮಾತು! ವಿದ್ರೋಹೀ ಮೂಲಪುರುಷನು ಇನ್ನೂ ಶಿಕ್ಕಿಲ್ಲವೆಂದರೆ ಸರ್ಕಾರದವರೆಲ್ಲಾ ಅವನ ಕಡೆಗೆ ಇದ್ದಾರೆಂದು ಅರ್ಥವಾಗುವುದಿಲ್ಲವೆ?

ದಿವಾನ-ಖಾನರವರೇ! ಫೌಜುದಾರ್ ಕುತುಬುದ್ದೀನರವರ ಅತ್ಯಾಚಾರ ಕ್ರೂರವರ್ತನೆಗಳೇ ಈ ವಿದ್ರೋಹದ ಮೂಲವೆಂದು ನನ್ನ ಮನಸ್ಸಿಗೆ ತಾರ್ಕಾಣೆಯಾಗಿದೆ. ಭಕ್ಷಿಯು ಶಿಕ್ಕದಿರುವುದು ಸರ್ಕಾರದ ಅವ್ಯವಸ್ಥೆಯೇ ಕಾರಣವೆಂದು ನಾನು ಒಪ್ಪುತ್ತೇನೆ.

ಇಯಚ್-ನಿನ್ನೆಯ ದಿನ ಬಂಧನದಲ್ಲಿದ್ದ ಫಕೀರನನ್ನು ಬಿಟ್ಟುಬಿಟ್ಟಿರಂತೆ! ವಿದ್ರೋಹಿಗಳನ್ನೆಲ್ಲಾ ಬಿಡುಗಡೆ ಮಾಡಿದಿರಂತೆ! ಇವನ್ನೆಲ್ಲಾ ಸುಲ್ತಾನರವರು ಒಪ್ಪುವರೇ! ಇದು ಅವರ ದರ್ಪಕ್ಕೇ ಲಾಂಛನವಲ್ಲವೇ?

ದಿವಾನ್-ಸುಲ್ತಾನರವರ ಕಡೆ ನೋಡಿದರೆ ನನ್ನ ಈ ಕಾರ್ಯಕಲಾಪಗಳೆಲ್ಲಾ ತಪ್ಪಾಗುವೆಂದೇ ತೋರುತ್ತದೆ. ಇಲ್ಲಿಯ ವಿದ್ಯಮಾನಗಳನ್ನು ಪರಿಶೀಲಿಸಿದರೆ ನನ್ನ ತೀರ್ಮಾನವೇ ಸರಿಯೆಂದು ತೋರುತ್ತದೆ. ಇಂಥಾ ಸಂದಿಗ್ಧತೆಯಲ್ಲಿ ಸಿಕ್ಕಿದ್ದೇನೆ ನಾನು! ಈ ಪರಿಸ್ಥಿತಿಯಲ್ಲಿ ಸುಲ್ತಾನರವರೇ ದಯಮಾಡಿಸಿದ್ದರೆ ಬಲು ಚೆನ್ನಾಗಿತ್ತು! ನನಗೆ ಭಯವಾಗುತ್ತಿದೆ. ಮಹಮುದಾಲಿಯವರ ಗತಿಯೋ, ನನಗೆಲ್ಲಿ ಬರುತ್ತದೋ ಎಂದು! ಮರಣಕ್ಕೆ ನಾನು ಅಂಜುವುದಿಲ್ಲ. ಮಾನದ ಭಯ!

ಇಯಚ್-ಜನಾಲುದ್ದೀನರವರೇ! ತಾವು ಮಾನ್ಯರಾದ ಸರದಾರರು! ತಮಗೆ ಯಾವ ಭಯಕ್ಕೂ ಕಾರಣವಿಲ್ಲ! ಈಗ ರಾಧಾರಾಣಿಯವರು ತಮಗೆ ಬೆಂಬಲವಾಗಿದಾರೆ. ಇದಕ್ಕೆಲ್ಲಾ ರಾಣೀ ಸಾಹೇಬರವರೇ ಕಾರಣರೆಂದು ಕೇಳಿದ್ದೇನೆ. ಅವರು ಅಡಿಗಡಿಗೂ ವಿದ್ರೋಹಿಗಳ ಪರ ವಕಾಲತ್ತು ವಹಿಸುತ್ತಾರೆಂದು ವಿದ್ರೋಹಿಗಳೆಲ್ಲಾ ಹೇಳುತ್ತಾರೆ. ಅವರು ನಿಮ್ಮ ಸುಲ್ತಾನರನ್ನು ದಾರಿಗೆ ತರಬಲ್ಲರು!

ದಿವಾನ-ಹುಜೂರು! ನ್ಯಾಯಧರ್ಮಗಳೊಂದು ಕಡೆ! ರಾಧಾರಾಣಿಯವರ ಅಭಯ ಹಸ್ತವು ಮತ್ತೊಂದು ಕಡೆ! ಈ ಮಧ್ಯೆ ನನಗೆ ಭಯವಿಲ್ಲವೆಂದು ನಂಬಿದೇನೆ.

ಇಯಚ್-ರಾಣಿಯವರೇ! ದಿವಾನರವರನ್ನು ಇಲ್ಲಿಗೆ ಕರತಂದ ಉದ್ದೇಶವೇನು?

ಹುಸೇ- ನವಾಬರೇ, ನನ್ನ ಮನಸ್ಸು ಸರ್ವದಾ ಕಾದಕ್ಕಬ್ಬಿಣದಂತಿದೆ. ನನಗೆ ಏನೂ ತೋರ..ವುದಿಲ್ಲ. ಎಷ್ಟೋಬಾರಿ ಪ್ರಾಣವನ್ನು ಕಳದುಕೊಳ್ಳಬೇಕೆಂದು ತೋರುತ್ತದೆ.

ಸೇಟ್- ಅದು ವೀರ ಪುರುಷರ ಲಕ್ಷಣವಲ್ಲ!

ಹುಸೇ- ನಾನೇನು ಮಾಡಬೇಕೆಂದು ಹುಜೂರಿನ ಅಪ್ಪಣೆಯಾಗುತ್ತದೆ?

ಸೇಟ್-ನೀನು ಸೇನಾನಾಯಕನಾಗಬೇಕೆಂದು ನನ್ನ ಇಚ್ಛೆ!

ಹುಸೇ- ಖಾವಿಂದ್, ಯಾವಸೇನೆ! ಯಾರ ಮೇಲೆ ಯುದ್ಧ ಮಾಡಬೇಕು.

ಸೇಟ್- ವೀರಪುರುಷರು ತಮ್ಮ ರಾಜ್ಯಕ್ಕಾಗಿ ಯುದ್ಧ ಮಾಡಬೇಕು!

ಹುಸೇ- ನವಾಬರವರೇ, ನಮಗೆ ರಾಜ್ಯವೆಲ್ಲಿದೆ? ಯಾರಿಗಾಗಿ ಯುದ್ಧ ಮಾಡಬೇಕು?

ಸೇಟ್- ಹುಸೇಖಾನ್, ದಕ್ಷಿಣದೇಶದಲ್ಲಿ ಸುಲ್ತಾನರ ರಾಜ್ಯ, ಮರಾಟರ ರಾಜ್ಯ ಎರಡೇರಾಜ್ಯಗಳಿರತಕ್ಕದ್ದು. ಇಂಗ್ಲಿಷರು ರಾಜ್ಯವನ್ನು ಕಟ್ಟುತ್ತಿದಾರೆ. ಕೊನೆಯಲ್ಲಿ ಈ ಮೂರರಲ್ಲಿ ಯಾವುದೋ ಒಂದುರಾಜ್ಯವು ಸ್ಥಿರವಾಗಬೇಕು. ನಾವುಗಳು ಸುಲ್ತಾನೀ ರಾಜ್ಯವನ್ನು ಸ್ಥಾಪಿಸುವುದಕ್ಕಾಗಿಯೇ ಹೋರಾಡಬೇಕು. ನಮಗೆ ಪ್ರತ್ಯೇಕ ರಾಜ್ಯವೆಲ್ಲಿತ್ತು! ನಗರದ ರಾಜ್ಯವೂ ಸುಲ್ತಾನರವರದೇ!

ಹುಸೇ- ನವಾಬರವರೇ, ತಾವು ಹೇಳುವುದು ವಿಚಿತ್ರವಾಗಿದೆ. ನನ್ನ ಮನಸ್ಸಿನಲ್ಲಿ ಸುಲ್ತಾನರ ಮೇಲಿನ ದ್ವೇಷವು ಉರಿಯುತ್ತಿದೆ. ತಾವು ಪ್ರಮಾಣವಾಗಿ ಹೇಳಿರಿ! ತಮಗೆ ಸುಲ್ತಾನರ ಮೇಲೆ ದ್ವೇಷವಿಲ್ಲವೆ?

ಸೇಟನು ನಗುತ್ತಾ-ಇಲ್ಲ, ಹುಸೇಖಾನ್! ನಿಜವಾಗಿ ನನಗೆ ಸುಲ್ತಾನರ ಮೇಲೆ ದ್ವೇಷವಿಲ್ಲ. ಇದನ್ನು ನಂಬು. ದೊಡ್ಡ ನವಾಬರು ನನ್ನನ್ನು ಸಾಕಿ ಸಲಹಿದ ತಂದೆ! ಸುಲ್ತಾನೀ ರಾಜ್ಯವನ್ನು ಕಟ್ಟಿದವರು ಅವರು. ಅವರ ಸಾಕ್ಷಾತ್ ಪುತ್ರರು ಸುಲ್ತಾನರು. ಅವರಮೇಲೆ ನಾನು ದ್ವೇಷ ಮಾಡುವುದೆಂತು.

ಹುಸೇ- ಕ್ರೋಧ-ದುಃಖಗಳಿಂದ-

ನವಾಬರೇ, ಹಾಗಾದರೆ ತಾವು ಶ್ರೀರಂಗಪಟ್ಟಣಕ್ಕೆ ಹೋಗಿ ನವಾಬರಿಗೆ ಅಂಕಿತರಾಗಿ ರಾಜ್ಯಭಾರವನ್ನೇ ನಡೆಸಬಹುದಲ್ಲ.

